business such business shall have precedence and the Secretary shall arrange that business in such order as the Speaker may, in consultation with the Leader of the House determine :

Provided that such order of business shall not be varied on the day that business is set down for disposal unless the Speaker is satisfied that there is sufficient ground for such variation."

ಮತ್ತು Rule 31 reads as follows :

I will read Sub-Rule (2) :

"A list of business for the day shall be prepaed by the Secretary, and a copy thereof together with other papers, if any, shall be made available for the use of every member the previous day." ಈ ರೀತಿ ಇದೆ.

ಈಗ ಏನಾಗಿದೆ ಎಂದರೆ ಮುಂಚಿತವಾಗಿಯೇ ನಿಮಗೆ ಬೇಕಾದ ಬಿಲ್ಲನ್ನು ತರುತ್ತೀರಿ. ಅದರ ಕಾಪಿಯನ್ನೂ ಸಹ ನಮಗೆ ಕೊಡುವುದಿಲ್ಲ. ಒಂದು ದಿವಸ ಮುಂಚಿತವಾಗಿಯಾದರೂ ಫೈನಾನ್ಷಿಯಲ್ ಮೆಮೋರ್ಯಾಂಡಂ ಏನು ಇದೆ ಅದು ಕೂಡ ಕೊಡುವುದಿಲ್ಲ. ಲೆಜಿಸ್ಲೇಚರ್ ಸೆಕ್ರೆಟೇರಿಯೆಟ್ಟಿನವರು ಒದಗಿಸಬೇಕಾದ ಕಾಪಿಯನ್ನು ಒದಗಿಸುತ್ತಾ ಇಲ್ಲ. ಇಲ್ಲದೇ ಹೋದರೆ ತಾವು ರೂಲನ್ನು ಸಸ್ಪೆಂಡ್ ಮಾಡಬೇಕು. ಇದಕ್ಕಿಂತ ಮುಂಚೆ ಎರಡು ಬಿಲ್ಲು ಬಂದಿತ್ತು. ಅದರ ಕಾಪಿಯನ್ನು ಕೊಡಲಿಲ್ಲ. ಇದನ್ನು ಸೆಕ್ರೆಟರಿಯವರ ಗಮನಕ್ಕೆ ತಂದೆ. ಮುಂದಾದರೂ ಈ ಬಿಲ್ಲಿನ ಕಾಪಿಯನ್ನು ಕೊಡಿ. ಸರಿಯಾಗಿ ಇಂಟ್ರೊಡಕ್ಷನ್ ಆಗುತ್ತದೆಯೇ ಇಲ್ಲವೇ ಎನ್ನುವುದನ್ನು ನೋಡಬೇಕು. ಈಗ ಶ್ರೀಮಾನ್ ಪಿ. ಎಂ. ನಾಡಗೌಡರು ಇಂಟ್ರಡ್ಯೂಸ್ ಮಾಡುವ ಬಿಲ್ಲು ಏನು ಇದೆ The Mysore Weights and Measures (Enforcement) (Amendment) Bill, 1969 ಈ ಕಾಪಿಯನ್ನು ಕೊಟ್ಟಿಲ್ಲ. ಮತ್ತು ಅಗ್ರಿಕಲ್ಚರಲ್ ಮಿನಿಸ್ಟರ್ ಅವರು ಇಂಟ್ರಡ್ಯೂಸ್ ಮಾಡತಕ್ಕಂಥ ಬಿಲ್ಲು ಏನು ಇದೆ The Mysore Silkworm Seed and Cocoon (Regulation of Production, Supply and Distribution) (Amendment) Bill, 1969 ಇದರ ಕಾಪಿಯನ್ನೂ ಕೊಟ್ಟಿಲ್ಲ. ತಾವು ದಯವಿಟ್ಟು ಇದರಲ್ಲಿ ತರಕೂಡದು. ಇಂತಹ ಆಬ್ಜೆಕ್ಷನ್ ಇದ್ದರೆ ರೂಲು ಸಸ್ಪೆಂಡ್ ಮಾಡಲು ಪವರ್ ಇದೆ. ಈಗ ಕಾಯಿದೆ ಮಂತ್ರಿಗಳು ಏನು ಮಾಡುತ್ತಿದ್ದಾರೆ ಎಂದು ಕೇಳುತ್ತೇನೆ. ಹಿಂದೆ ಬೆಂಗಳೂರು ಕಾರ್ಪೊರೇಷನ್ ಅಮೆಂಡ್ ಮೆಂಟ್ ಬಿಲ್ ತಂದಾಗ ಮುಂದಕ್ಕೆ ಹಾಕಿ, ಗವರ್ನರ ಹತ್ತಿರ ಸೈನ್ ಹಾಕಿಸಿಕೊಂಡು ಇಂಟ್ರಡ್ಯೂಸ್ ಮಾಡಿದರು. ಮುಂದೆ ಇಂಥಾದ್ದಕ್ಕೆ ಅವಕಾಶ ಕೊಡದೆ ಮೊದಲೇ ಬಿಲ್ ಕಾಪಿಯನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

MR. SPEAKER.—The Hon. Member has made out a good point. Rules will be strictly followed.

Mysore Irrigation (Levy of Betterment Contribution and Water Rate) (Amendment) Bill, 1969.

Motion to consider—Debate Continued

(MR. DEPUTY SPEAKER in the Chair)

†ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಶ್ರೀಮಾನ್ ಪುಟ್ಟಸ್ವಾಮಿ.ಯವರು ಈವೊತ್ತಿನ ದಿವಸ ಸರ್ಕಾರಕ್ಕೆ ಹಣ ಇಲ್ಲ, ನಾವು ಯೋಜನೆಯನ್ನು ಕೈಗೊಳ್ಳಬೇಕಾಗಿದೆ, ಸಾರ್ವಜನಿಕರ ಹತ್ತಿರಕ್ಕೆ ಹೋಗಿ ಹಣವನ್ನು ಕೇಳಬೇಕಾದ ಪರಿಸ್ಥಿತಿಗೆ

(ಶ್ರೀ ಎರ್. ಶ್ರೀಕಂಠಯ್ಯ)

ಬಂದಿದ್ದೇವೆ ಎಂದು ಹೇಳಿದರು. ಇದು ತಪ್ಪು ಎಂದು ಹೇಳುತ್ತೇನೆ. ನಿಮಗೆ ಬೇರೆ ಮಾರ್ಗಗಳಿಂದ ಹಣ ಬರುವ ಸೂಚನೆಗಳನ್ನು ಕೊಡುತ್ತೇನೆ. ತಾವು ಈ ಬಿಲ್ಲಿನ ಮುಖಾಂತರ ನಿರೀಕ್ಷಿಸಿದಂತೆ ಸಾರ್ವಜನಿಕರಿಂದ ಹಣ ವಸೂಲಾಗುವುದು ಸಾಧ್ಯವೇ ಎಂದು ತಮ್ಮನ್ನು ಪ್ರಶ್ನಿಸಬೇಕಾಗಿದೆ. ಇದರ ಬಗ್ಗೆ ಇನ್ನೊಂದು ವಿಷಯವನ್ನು ಹೇಳಿದರು ಅದು ಏನೆಂದರೆ ಬ್ಯಾಂಕುಗಳಲ್ಲಿ ಜಮೀನು ಒತ್ತೆ ಇಟ್ಟು ಅವರು ಸರ್ಕಾರಕ್ಕೆ ಸಾಲ ಕೊಡುವುದು ಎಂದು. ಈವೊತ್ತು ಹಳ್ಳಿಗಾಡಿನ ಜನರ ಪರಿಸ್ಥಿತಿ ಹೇಗಿದೆ ಎಂಬುದು ತಮಗೆ ಚೆನ್ನಾಗಿ ಗೊತ್ತಿದೆ. ಅದನ್ನು ಯೋಚನೆ ಮಾಡಬೇಕು. ರೈತರ ಋಣಪರಿಹಾರ ಮಾಡುವ ದೃಷ್ಟಿಯಿಂದ ಹಿಂದೆ ಅಗ್ರಿಕಲ್ಚರಲ್ ಡೆಟ್ ರಿಲೀಫ್ ಬಿಲ್ ತಂದಿದ್ದರು. ಆದರಲ್ಲಿ ಶೇಕಡ 90 ಭಾಗ ಜನ ಮೊದಲೇ ತಮ್ಮ ಆಸ್ತಿಪಾಸ್ತಿಗಳನ್ನೂ ಈಡು ಮಾಡಿದ್ದಾರೆ. ಕೋಆಪರೇಟಿವ್ ಬ್ಯಾಂಕಿಗೆ, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಇನ್ನೂ ಇತರ ಖಾಸಗೀ ಬ್ಯಾಂಕುಗಳಿಗೆ ಈಡು ಮಾಡಿದ್ದಾರೆ. ಇಂಥ ಪರಿಸ್ಥಿತಿ ಇರುವಾಗ ಸರ್ಕಾರದವರು ಶಿಫಾರಸ್ಸು ಮಾಡಿ ಕೊಡಿಸತಕ್ಕಂಥ ಸಾಲ ಬ್ಯಾಂಕುಗಳಿಂದ ಸಿಕ್ಕುತ್ತದೆಯೋ ಎನ್ನುವುದನ್ನು ಯೋಚನೆ ಮಾಡಬೇಕು. ಒಂದು ಪಕ್ಷ ಸಾಲಕೊಡಿಸಿದರು ಎಂದು ಇಟ್ಟುಕೊಳ್ಳೋಣ. ಆ ಸಾಲಕ್ಕೆ ಸರ್ಕಾರದವರು ಬಡ್ಡಿ ಕೊಡುತ್ತಾರೆಯೋ ? ಇದನ್ನು ನೋಡಿದರೆ ಯಾವನೋ ಒಬ್ಬ ಅಚ್ಚುಕಟ್ಟುದಾರನು ಪ್ರಯೋಜನ ಪಡೆಯಲು ಅವನಿಗೆ ಮಾತ್ರ ಬ್ಯಾಂಕಿನವರು ಹಣ ಕೊಡುತ್ತಾರೆ. ಇದು ಮುಖ್ಯವಾದಂಥ ಪ್ರಶ್ನೆ. ಈವೊತ್ತು ಸಾಲದ ಹೊರೆಯನ್ನು ತೀರಿಸಿಕೊಳ್ಳಲು ಸಾಧ್ಯ ಇಲ್ಲದೇ ಇರುವ ರೈತನಿಗೆ ನೀವು ಎಲ್ಲರೂ ಸೇರಿ ಬ್ಯಾಂಕಿನಲ್ಲಿ ಸಾಲ ಕೊಡಿಸುತ್ತೀರಿ ಎಂದು ಇಟ್ಟುಕೊಂಡರೂ ಕೂಡ ಅದರ ಮೇಲಿನ ಬಡ್ಡಿಯನ್ನಾದರೂ ಕಟ್ಟುವುದಕ್ಕೆ ಒಂದು ದಾರಿ ಬೇಡವೇ ? ನೀವು ಬ್ಯಾಂಕಿನಲ್ಲಿ ಸಾಲ ಕೊಡಿಸಿದರೂ ಅವನಿಗೆ ಹಣವನ್ನು ಕಟ್ಟುವುದಕ್ಕೆ ಒಂದು ಮಾರ್ಗ ಮಾಡದೇಹೋದರೆ ಅವನಿಗೆ ಎಷ್ಟರಮಟ್ಟಿಗೆ ಸಹಾಯವಾಗಬಹುದು ಅವನು ತೆಗೆದುಕೊಂಡಿರುವ ದುಡ್ಡನ್ನು ವಾಪಸು ಮಾಡುವುದಕ್ಕಾಗುತ್ತದೆಯೇ ! ಇದರಿಂದ ನಿಮ್ಮ ಯೋಜನೆ ಸಫಲವಾಗುತ್ತದೆಯೇ ! ಇದನ್ನು ನೋಡಿದರೆ ನನಗೆ ಅಷ್ಟು ಸೂಕ್ತವಾಗಿ ಕಾಣುವುದಿಲ್ಲ.

ಈಗ ಮಸೂದೆಯನ್ನು ತಂದಿರುವ ರೀತಿಯನ್ನು ನೋಡಿದರೆ ನನಗೆ ಇನ್ನೊಂದು ತರಹ ಹೆದರಿಕೆ ಬರುತ್ತಿದೆ. ಅದನ್ನು ಮಾಡಿಲ್ಲ ಇದನ್ನು ಮಾಡಿಲ್ಲ ಎನ್ನುವ ಟೀಕೆಗೆ ನಾವು ಸರ್ಕಾರವನ್ನು ಒಳಪಡಿಸುತ್ತಿದ್ದೇವೆ. ಆದರೆ ಇನ್ನು ಮುಂದೆ ಈ ಮಸೂದೆಯಲ್ಲಿ ಹೊಸದಾಗಿ ಸೇರಿಸಬೇಕೆಂದಿರುವ ಸೆಕ್ಷನ್ 3(ಎ) ಜನರ ಮುಂದೆ ಇಟ್ಟು ಕೆಲಸಕಾರ್ಯಗಳು ಆಗದೆ ಇರುವುದರಲ್ಲಿ ನಮ್ಮ ತಪ್ಪು ಏನೂ ಇಲ್ಲ, ನಾವು ಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಿದ್ದೇವೆ, ನೀವು ಹಣ ಕೊಟ್ಟಿಲ್ಲವಾದ್ದರಿಂದ ನಿಮ್ಮ ಕ್ಷೇತ್ರದಲ್ಲಿ ಕೆಲಸವಾಗಲಿಲ್ಲ ಎಂದು ಹೇಳಲು ಅವಕಾಶವಾಗುವಂಥ ಎಸ್ಕೇಪ್ ಕ್ಲಾಜನ್ನು ಜನರ ಮುಂದೆ ಇಟ್ಟು ಸರ್ಕಾರ ತನ್ನ ಮೇಲಿರುವ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಹಾಗೆ ಇದೆ. ಇದಕ್ಕೆ ಹೊಣೆ ಯಾರು ! ಸರ್ಕಾರ ತನ್ನಲ್ಲಿ ಹಣವಿಲ್ಲ, ಸಾರ್ವಜನಿಕರಿಂದ ಹಣ ಬರಬೇಕು ಎಂದು ಹೇಳುವಾಗ ಇನ್ನೊಂದು ಪ್ರಶ್ನೆ ಬರುತ್ತದೆ. ಸಾರ್ವಜನಿಕರ ಹತ್ತಿರ ಹಣ ಕೇಳಬೇಡಿ ಎಂದು ನಾವು ಹೇಳಿದರೆ ಹಣಕ್ಕೆ ಬೇರೆ ಮಾರ್ಗವನ್ನು ತೋರಿಸಿಕೊಡಿ ಎನ್ನುವ ವಿಚಾರ ಬರುತ್ತದೆ. ಸರ್ಕಾರದಲ್ಲಿ ಹಣವಿಲ್ಲವೇ ಅಥವಾ ಇದ್ದ ಹಣವನ್ನು ಸರಿಯಾಗಿ ಉಪಯೋಗ ಮಾಡಿದ್ದಾರೆಯೇ ಎನ್ನುವುದು ಮೂಲಭೂತ ಪ್ರಶ್ನೆ. ಸಪ್ಲಿಮೆಂಟರಿ ಬೇಡಿಕೆಗಳನ್ನು ನೋಡಿದರೆ ಸರ್ಕಾರದ ಹಣವನ್ನು ಯಾವರೀತಿಯಿಂದ ಹಣಕಾಸು ಶಾಖೆ ವ್ಯಯಮಾಡುತ್ತಿದೆ ಎನ್ನುವ ಸ್ಪಷ್ಟ ಚಿತ್ರವನ್ನು ನಾವು ಕಾಣುತ್ತೇವೆ. ಲಿಂಡ್ರಾಪ್ರೋಲ್ ಕಂಪೆನಿಗಳಿಗೆ ಸಾಲ, ಬಿಳಿ ಆನೆಯಂತೆ ಬೆಳೆಸಿಕೊಂಡು ಬಂದಿರುವ ಸಹಕಾರ ಸಂಸ್ಥೆಗಳಿಗೆ ಸಾಲ ಹೇಗೆಕೊಡುತ್ತ ಹೋದರೆ ಹೇಗೆ ? ಇದರಲ್ಲಿ ಎಷ್ಟು ಸಾಲ ವಸೂಲಾಗಿದೆ, ಎಷ್ಟು ಸರ್ಕಾರಕ್ಕೆ ಹಿಂದಕ್ಕೆ ಬಂದಿದೆ ? ಪರಿಸ್ಥಿತಿ ಹೀಗಿರುವುದರಿಂದ ಸಾರ್ವಜನಿಕರು ಸರ್ಕಾರಕ್ಕೆ ಹಣವನ್ನು ಕೊಟ್ಟರೆ ಅದನ್ನು ಯಾವರೀತಿ ವಿತರಣೆ ಮಾಡುತ್ತೀರಿ ? ಸಪ್ಲಿಮೆಂಟರಿ ಬೇಡಿಕೆಗಳನ್ನು ನೋಡಿದರೆ ಸರ್ಕಾರ ದುಂದು ವೆಚ್ಚ ಮಾಡುತ್ತಿರುವುದು ಸ್ಪಷ್ಟವಾಗಿದೆ. ಕರ್ಣಾಟಕ ಪಬ್ಲಿಷಿಂಗ್ ಹೌಸ್‌ಗೆ 10 ಲಕ್ಷ ರೂಪಾಯಿ, ಕಿತ್ತೂರು ರಾಣಿ ಚೆನ್ನಮ್ಮ ಸ್ಮಾರಕ ಸಂಸ್ಥೆಗೆ 10 ಲಕ್ಷ ರೂಪಾಯಿ ಹೀಗೆಲ್ಲ ಕೊಟ್ಟಿದ್ದಾರೆ. ಇಂಥದನ್ನು ಸಪ್ಲಿಮೆಂಟರಿ ಗ್ರ್ಯಾಂಟಿನಲ್ಲಿ ಎಷ್ಟು ಬೇಕಾದರೂ ತೋರಿಸಬಹುದು. ಇದೆಲ್ಲ ಹಣವಲ್ಲವೇ ? ಇದನ್ನೆಲ್ಲ ಕೂಡಿ ಹಾಕಿದರೆ ಎಷ್ಟು ಕೋಟಿ ರೂಪಾಯಿ ಆಗುತ್ತದೆ ! ಹೀಗಿರುವಾಗ ಯಾವ ನಾಲಗೆಯಿಂದ ಸಾರ್ವಜನಿಕರಿಂದ ಹಣವನ್ನು ಕೇಳುತ್ತೀರಿ ! ನೀವು ರಾಜ್ಯ ಸರ್ಕಾರದ ಸಾಲವನ್ನು ಎತ್ತಬೇಕು ಎಂದರೆ ಶೇಕಡ ಎಂಟು, ಒಂಬತ್ತರಷ್ಟು ಬಡ್ಡಿ ಕೊಡುತ್ತೇವೆಂದು ಆಸೆಯನ್ನು ತೋರಿಸಿದರೆ ಆಗ ಸಾಲ ಪೂರ್ತಿಯಾಗಿ ಭರ್ತಿಯಾಗುತ್ತದೆಯೋ

ಹೊರತು ವಾಲಂಟರಿಯಾಗಿ ಸರ್ಕಾರದಮೇಲೆ ಭರವಸೆಯನ್ನು ಇಟ್ಟು ಯಾರೂ ಹಣವನ್ನು ಕೊಡುವುದಿಲ್ಲ. ಸರ್ಕಾರದ ಹಣಕಾಸಿನ ರೀತಿನೀತಿಯ ವಿಚಾರದಲ್ಲಿ ಸಾರ್ವಜನಿಕರಲ್ಲಿ ಏನಾದರೂ ನಂಬಿಕೆ ಹುಟ್ಟಿದೆಯೇ ಎಂದು ನೋಡಿದರೆ, ಸರ್ಕಾರದವರು ಮೊನ್ನೆ ಮಂಡಿಸಿದ ಸಪ್ಲಿಮೆಂಟರಿ ಬೇಡಿಕೆಗಳನ್ನು ನೋಡುತ್ತಾ ಹೋದರೆ ಪ್ರತಿಯೊಂದೂ ಕೂಡ ದುಂದು ವೆಚ್ಚದ ಪರಮಾವಧಿಯಾಗಿರುವುದು ಕಾಣುತ್ತದೆ. ಸರ್ಕಾರದವರು ಮಿತವ್ಯಯ ಮಾಡುತ್ತೇವೆ ಎಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಆದರೆ ಯಾವ ಎಕಾನಮಿ ಮಾಡಿದ್ದಾರೆ ? ನೆರೆ ಪ್ರಾಂತವಾದ ಮದ್ರಾಸ್ ರಾಜ್ಯದಲ್ಲಿ ಹೆಚ್ಚು ಜನಸಂಖ್ಯೆ ಇರುವ ಕಡೆ ಮಂತ್ರಿಮಂಡಲದ ಗಾತ್ರವೇನು, ಅದಕ್ಕೆ ಆಗುವ ಖರ್ಚು ಎಷ್ಟು, ಅದಕ್ಕಿಂತ ಜನಸಂಖ್ಯೆಯಲ್ಲಿ ಕಡಮೆ ಇರುವ ಮೈಸೂರು ರಾಜ್ಯದ ಮಂತ್ರಿಮಂಡಲದ ಗಾತ್ರವೇನು ಮತ್ತು ಅದಕ್ಕೆ ಆಗುತ್ತಿರುವ ಖರ್ಚು ಎಷ್ಟು ? ಇದರ ಜೊತೆಗೆ ಮಂತ್ರಿಗಳ ವಿದೇಶ ಪ್ರವಾಸ ಬೇರೆ ಶ್ರೀ ಜಿ.ಬಿ. ಶಂಕರರಾಯರೂ, ಶ್ರೀ ವೈ. ರಾಮಕೃಷ್ಣ ಅವರೂ ಈಗ ವಿದೇಶ ಪ್ರವಾಸ ಹೋಗಿದ್ದಾರೆ. ಯಾವ ಫೀಲ್ಡ್‌ನಲ್ಲಿ ಅವರು ಎಕ್ಸ್‌ಪರ್ಟ್ಸ್ ಆಗಿದ್ದಾರೆ? ಒಬ್ಬರು ಕುಕ್ಕುಟ ಶಾಸ್ತ್ರದಲ್ಲಿ ಎಕ್ಸ್‌ಪರ್ಟ್ ಇರಬಹುದು, ಇನ್ನೊಬ್ಬರು ಯಾವ ಶಾಸ್ತ್ರದಲ್ಲಿ ಎಕ್ಸ್‌ಪರ್ಟ್ ಆಗಿದ್ದಾರೆ ? ನಿಜವಾಗಿಯೂ ಆತ್ಮಸಾಕ್ಷಿಯಿಂದ ಇವರು ಹಣಕಾಸಿನ ವ್ಯವಹಾರವನ್ನು ನಡೆಸುವುದಾಗಿದ್ದರೆ ಈ ದುಂದು ವೆಚ್ಚವೆಲ್ಲಾ ಏಕೆ ಬೇಕು ? ನಾವು ಇರುವ ಕಾಲದಲ್ಲಿ ಸಾರ್ವಜನಿಕರ ದುಡ್ಡು ಸಿಕ್ಕುತ್ತದೆ, ವಿದೇಶ ಪ್ರವಾಸಮಾಡಿ ಮುಗಿಸೋಣ, ಮುಂದಿನ ಸಲ ಚುನಾವಣೆಗಳಲ್ಲಿ ಬರುತ್ತೇವೆ ಎನ್ನುವ ಗ್ಯಾರಂಟಿ ಇಲ್ಲ ಎಂದು ಸಾರ್ವಜನಿಕರ ದುಡ್ಡನ್ನು ವ್ಯಯ ಮಾಡುವುದಕ್ಕೆ ಪ್ರಯತ್ನ ಪಟ್ಟರೆ ಅದು ಬೇರೆ ವಿಷಯ. 'ಶಂಕರ್ಸ್ ವೀಕ್ಲಿ' ಯಲ್ಲಿ ಒಂದು ವ್ಯಂಗ್ಯ ಚಿತ್ರವನ್ನು ನೋಡಿದೆ. ಒಬ್ಬ ದೊಡ್ಡ ಅಧಿಕಾರಿ ಕುಳಿತಿದ್ದಾನೆ. ಬ್ಯಾಂಕ್ ರಾಷ್ಟ್ರೀಕರಣ ವಾಯಿತು ಎಂದು ತಿಳಿದಮೇಲೆ, ನನಗೆ ಮೊದಲು ರಾಷ್ಟ್ರೀಕರಣವೆಂದರೆ ಇಷ್ಟವಾಗಿ ಆಗುತ್ತಿರಲಿಲ್ಲ, ಈಗ ಅದನ್ನು ಸ್ವಾಗತ ಮಾಡುತ್ತೇನೆಂದು ಹೇಳುತ್ತಾನೆ. ಏಕೆ ಎಂದು ಇನ್ನೊಬ್ಬರು ಕೇಳಿದರೆ, ರಾಷ್ಟ್ರೀಕರಣ ಮಾಡಿದ್ದರಿಂದ ಸಮ್ಮೇಳನಗಳು, ಬೋರ್ಡುಗಳು, ಸೆಮಿನಾರ್‌ಗಳು, ಅಡ್ವೈಜರಿ ಕಮಿಟಿ ಮೀಟಿಂಗ್‌ಗಳು, ಸ್ಟಾಫ್ ಮೀಟಿಂಗ್‌ಗಳು ಇವೆಲ್ಲ ಸೌಲಭ್ಯಗಳು ಸಿಕ್ಕುತ್ತವೆ, ಅದಕ್ಕಾಗಿ ಸ್ವಾಗತ ಏಕೆ ಮಾಡಬಾರದು ಎಂದು ಕೇಳುತ್ತಾನೆ. ಮೊದಲು ಅಪೋಸ್ ಮಾಡಿದವರು ಸೌಲಭ್ಯ ದೊರೆಯುವುದೆಂದು ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಲು ಒಪ್ಪಿದರು. ಸಾರ್ವಜನಿಕ ಹಣ ದುರುಪಯೋಗ ಮಾಡುತ್ತಾ ಹಣವಿಲ್ಲವೆಂದು ಹೇಳುವುದು ಸಮಂಜಸವಲ್ಲ, ಹಣವಿದೆ. ನಿಜವಾಗಿಯೂ ಆಸಕ್ತಿಯಿಂದ ಮಾಡುವುದಾದರೆ ಹೇರಳವಾದ ಹಣವಿದೆ, ಸಾರ್ವಜನಿಕರೂ ಸಹಕಾರ ಮಾಡುವರು. ಯೋಜನೆ ಸಫಲಗೊಳಿಸುವುದಕ್ಕೆ ಸೆಕ್ಷನ್ (3) ಎನೇಬ್ಲಿಂಗ್ ಕ್ಲಾಜು ಎಂದು ಹೇಳಿದರು. ಅಪೇಕ್ಷೆ ಪಡುವ ರೈತರಿಗೆ ಸೌಲಭ್ಯ ಮಾಡಿ ಕೊಡುವರು, ಹಣ ಮುಂದಾಗಿ ಕೊಟ್ಟರೆ ಯೋಜನೆ ಕಾರ್ಯರೂಪಕ್ಕೆ ತರುವರು, ಸಂತೋಷ. ಹಣ ಕೊಡಲು ತೊಂದರೆಯಿಲ್ಲ. ಆದರೆ ಹಣ ಯಾವರೀತಿ ವ್ಯಯವಾಗುತ್ತಿದೆಯೆಂಬುದನ್ನು ನೋಡಿ ದರೆ ಹಣ ಕೊಡುವುದಕ್ಕೆ ಧೈರ್ಯವಿಲ್ಲ. ಆದುದರಿಂದ ಮೊಟ್ಟಮೊದಲನೆಯದಾಗಿ ಈ ಸಂಸ್ಥಾನದಲ್ಲಿ ಎಲ್ಲಿ ಯೋಜನೆಯಾಗಬೇಕೋ ಅದಕ್ಕೆ ಬ್ಲೂ ಪ್ರಿಂಟ್ ತಯಾರಿಸಿದ್ದೀರಾ ? ಸಣ್ಣದು, ದೊಡ್ಡದು ಪ್ರತಿಯೊಂದು ಯೋಜನೆಗೂ ತಗಲುವ ವೆಚ್ಚ ಒಂದು ಕಡೆ ಬರೆದಿದ್ದೀರಾ ಎಂದು ಕೇಳಬೇಕಾಗಿದೆ. ಮತ್ತು ನಿಮ್ಮ ಸಿನ್ಸಿಯಾರಿಟಿ ತೋರಿಸಲು ಪ್ರತಿಯೊಂದು ಪ್ರಾಜೆಕ್ಟಿಗೂ ಸೇಕಡ 50 ಭಾಗ ಸರಕಾರ ಇನ್‌ವೆಸ್ಟ್ ಮಾಡುವುದಾಗಿ ಮೊದಲು ಭರವಸೆ ಕೊಡಬೇಕು. ನಂತರ ಉಳಿದ ಸೇಕಡ 50 ಭಾಗ ವಾಲಂಟರಿ ಕಾಂಟ್ರಿಬ್ಯೂಷನ್ನನ್ನು ಕೊಡಬೇಕೆಂದು ರೈತರನ್ನು ಕೇಳಬಹುದು, ಕೇಳಿ ಇಬ್ಬರೂ ಸೇರಿ ಕಾರ್ಯ ಮಾಡೋಣ ಎಂದು ಧೈರ್ಯ ಹೇಳಿ. ಹಾಗಿಲ್ಲದೆ ನೀವು ಜವಾಬ್ದಾರಿ ಜನರಮೇಲೆ ಹಾಕಿ, ಹಳ್ಳಿಗಾಡುಗಳವರಿಗೆ ಸಾಲದ ಹೊರೆ ಹೊರಿಸಿ, ರೈತರು ಹಣ ಕೊಟ್ಟಿಲ್ಲ, ಯೋಜನೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ಅರ್ಥವಾಗುವುದಿಲ್ಲ. ಆದುದರಿಂದ ಸೆಕ್ಷನ್ 3(ಎ) ಪ್ರಕಾರ ಮೂರು ಕಾಸೂ ಹುಟ್ಟುವುದಿಲ್ಲ ಎಂದು ಖಂಡಿತವಾಗಿ ಹೇಳಬಹುದು. ಹಳ್ಳಿಗಾಡಿನವರಿಗೆ ಹಣ ಕೊಡಲು ಚೈತನ್ಯವಿಲ್ಲ. ಬ್ಯಾಂಕುಗಳಿಂದ ಹಣ ಪಡೆದರೆ ಬಡ್ಡಿ ಯಾರು ಕೊಡಬೇಕು ಎಂಬ ಪ್ರಶ್ನೆ ಬರುವುದು. ಹಣವಿಲ್ಲದೆ ಯಾವ ಯೋಜನೆಯನ್ನೂ ತೆಗೆದುಕೊಳ್ಳುವುದಿಲ್ಲ. ಈ ಉದ್ದೇಶದಿಂದ ಈ ಸೆಕ್ಷನ್ ತಂದಿದ್ದಾರೆ. ಆಂಧ್ರ ಪ್ರದೇಶದ ಬೆಟರ್‌ಮೆಂಟ್ ಲೆವಿ ಆಕ್ಟ್ ಪ್ರಕಾರ ಸೂಕ್ತ ತಿದ್ದುಪಡಿ ಮಾಡುವುದು ಒಳ್ಳೆಯದು, ಅದು ಅಗತ್ಯವಾಗಿರುವುದರಿಂದ ಮಾಡಬೇಕು. ಬರೀ ಎನೇಬ್ಲಿಂಗ್ ಕ್ಲಾಜಿದ್ದರೆ ಸರಕಾರದ ಜವಾಬ್ದಾರಿಯಿಲ್ಲ. ಆದುದರಿಂದ ಸೂಕ್ತ ಬದಲಾವಣೆ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಮಸೂದೆಯು ವಿಚಾರದಲ್ಲಿ ಒಂದೆರಡು ವಿಷಯಗಳನ್ನು ತಮ್ಮ ಮುಂದಿಡಲು ನಾನು ಎದ್ದು ನಿಂತಿದ್ದೇನೆ. ಈ ಮಸೂದೆಯನ್ನು ಆಂಧ್ರ ಪ್ರದೇಶದ ಇರಿಗೇಷನ್ (ಲೆವಿ ಆಫ್ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್) ಆಕ್ಟ್, 1955 ಎನಿದೆ ಅದರ ಆಧಾರದ ಮೇಲೆ ಆ ಮಾದರಿಯಲ್ಲಿ ತಂದಿರುವುದಾಗಿ ತಿಳಿಸಿದ್ದಾರೆ. ಆಂಧ್ರ ಪ್ರದೇಶದ ಕೋಡ್ ನೋಡಿದಾಗ ಇಂಥ ಯಾವ ಮಸೂದೆಯೂ ಅದರಲ್ಲಿ ಕಾಣುತ್ತಿಲ್ಲ. ಕೋಡ್‌ನಲ್ಲಿರುವುದರಲ್ಲಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವ ವಿಚಾರ ಇಲ್ಲ.

ಆಕ್ಟ್ ನಂಬರ್ 25 ಆಫ್ 1955 ಇದಕ್ಕೆ ಸಂಬಂಧಪಟ್ಟ ಹಾಗೆ ಆಂಧ್ರ ಪ್ರದೇಶದಲ್ಲಿ ಏನಾದರೂ ಕಾಯಿದೆ ಇದೆಯೇ ಅಥವಾ ಇದಕ್ಕೆ ಸಂಬಂಧಪಟ್ಟ ಹಾಗೆ ರೂಲ್ಸ್ ಏನಾದರೂ ಮಾಡಿದ್ದಾರೆಯೇ ಎಂದು ತಿಳಿದುಕೊಳ್ಳಲು ಪ್ರಯತ್ನ ಪಟ್ಟೆ. ಅದು ಕಾನೂನು ಆಗಿದ್ದರೆ ಗೆಜೆಟಿನಲ್ಲಿ ಇರಬೇಕಾಗಿತ್ತು, ಗೆಜೆಟ್‌ನಲ್ಲಿ ಕಾಣುತ್ತಾ ಇಲ್ಲ. ಆಂಧ್ರ ಪ್ರದೇಶದಲ್ಲಿ ಇಂತಹ ಕಾನೂನು ಇದೆಯೇ ಎಂಬುದನ್ನು ತಿಳಿದುಕೊಳ್ಳಬೇಕೆಂದು ನೆನ್ನೆಯಿಂದ ಪ್ರಯತ್ನ ಮಾಡುತ್ತಾ ಇದ್ದೇನೆ, ಇದುವರೆಗೂ ಸಿಕ್ಕಲಿಲ್ಲ. ನನ್ನ ಹತ್ತಿರ ಒಂದು ಟೈಪ್ಡ್ ಕಾಪಿ ಇದೆ, ಅದನ್ನು ನೋಡಿ ಎಂದು ಸಂಬಂಧಪಟ್ಟ ಮಂತ್ರಿಗಳು ತೋರಿಸಿದರು. ಟೈಪ್ಡ್ ಕಾಪಿ ಇರುವುದೇ ಬೇರೆ, ಈ ಕೋಡ್‌ನಲ್ಲಿ ಇರುವುದೇ ಬೇರೆ, ಆದ್ದರಿಂದ ಸಂದೇಹ ಬಂದಿದೆ, ಆಂಧ್ರ ಪ್ರದೇಶದಲ್ಲಿ ಇಂಥಹ ಕಾನೂನು ಇದೆಯೇ ಇಲ್ಲವೇ ? ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿರುವ ಪ್ರಕಾರ ಇದೆಯೇ ಇಲ್ಲವೇ ಎಂಬುದನ್ನು ಮಾನ್ಯಮಂತ್ರಿಗಳು ಅವರ ಉತ್ತರದಲ್ಲಿ ಸ್ಪಷ್ಟೀಕರಿಸುತ್ತಾರೆ ಎಂದು ತಿಳಿಯುತ್ತೇನೆ. ಆ ರೀತಿ ಇದ್ದರೆ ಅದನ್ನು ಈ ಸಭೆಯ ಗಮನಕ್ಕೆ ತರುವುದು ಅತ್ಯಾವಶ್ಯಕ ಎಂಬುದನ್ನು ಹೇಳುತ್ತೇನೆ.

ಈ ಮಸೂದೆಯ ವಿಚಾರದಲ್ಲಿ ಕೆಲವು ವಿಷಯಗಳನ್ನು ಬಹಳ ದೀರ್ಘವಾಗಿ ಆಲೋಚನೆ ಮಾಡಿ ನೋಡಿದ್ದರಲ್ಲಿ, ಅವರು ಏನು ಸ್ಪಷ್ಟೀಕರಿಸುತ್ತಾರೆ ಎಂದರೆ ನಮ್ಮಲ್ಲಿ ದುಡ್ಡಿಲ್ಲ, ನಾವು ಇಂತಿಂಥ ದೊಡ್ಡ ದೊಡ್ಡ ಕಾಂಗಾರಿಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತಾ ಇದ್ದಾರೆ. ದುಡ್ಡಿಲ್ಲದೆ ಏನೂ ಮಾಡುವುದಕ್ಕಾಗುವುದಿಲ್ಲ, ರೈತರೂ ಸಹ ಸ್ವಪ್ರಯತ್ನವನ್ನು ಮಾಡಬೇಕು ಅವರು ಮುಂದೆ ಬಂದರೆ ಇದನ್ನು ಮಾಡಲಿಕ್ಕೆ ದಾರಿಯಾಗುತ್ತದೆ ಎಂಬ ಒಂದು ಅಂಶವನ್ನೂ ಇದರಲ್ಲಿ ವ್ಯಕ್ತಪಡಿಸುತ್ತಾರೆ. ಯಾವ ರೀತಿ ಇದನ್ನು ತಂದಿದ್ದಾರೆ ಎಂಬುದನ್ನು ನೋಡಿದರೆ ಯಾವ ಶಾಸನದ ಕಡತಕ್ಕೂ ಸೇರತಕ್ಕ ರೀತಿಯಲ್ಲಿ ಈ ಮಸೂದೆ ಇಲ್ಲ. 66 ಪರ್ಸೆಂಟ್ ಜನಗಳು ಯಾವುದಾದರೂ ಒಂದು ಭಾಗದಲ್ಲಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಅಂತ ಹೇಳಿ ಅದರಲ್ಲಿ ಐದನೆ ಮೂರನೆ ಭಾಗದ ಅಂಶ ಕೊಟ್ಟರೆ ಆ ಪ್ರದೇಶದಲ್ಲಿ ಅಂತಹ ಕಾಂಗಾರಿಗಳನ್ನು ತೆಗೆದುಕೊಳ್ಳುವುದಾಗಲಿ ಅಥವಾ ಮುಂದುವರಿಸುವುದಾಗಲಿ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ ಎಂಬ ಒಂದು ಅಂಶವನ್ನು ಹೇಳಿದ್ದಾರೆ. ಆದರೆ ಈ ಪರಿಸ್ಥಿತಿ ಏಕೆ ಬಂತು ! ಜನಗಳಲ್ಲಿ ಅನೇಕ ಸಂದೇಹಗಳು ಇವೆ, ಸಂಶಯ ಇದೆ. ಸರ್ಕಾರಕ್ಕೆ ಈ ಹಣವನ್ನು ಕೊಟ್ಟರೆ ಅವರು ನಿರ್ವಹಿಸಬಲ್ಲರೇ ? ಈ ಹಣವನ್ನು ಅವರು ತೆಗೆದುಕೊಂಡಮೇಲೆ ಸರಿಯಾದ ರೀತಿಯಲ್ಲಿ ಮಾಡತಕ್ಕ ಮನಸ್ಸು ಇದೆಯೇ, ಈಗ ಇವರು ಹೋಗತಕ್ಕ ಧಾಟಿಯಲ್ಲಿ ಸಾಧ್ಯವೇ ಎಂದು ಸಹಜವಾಗಿ ಜನಗಳು ಅನುಮಾನವನ್ನು ವ್ಯಕ್ತಪಡಿಸುತ್ತಾರೆ. ಏಕೆಂದರೆ ಭಾರತದಲ್ಲಿ ಈಗಿರತಕ್ಕ ದೊಡ್ಡ ದೊಡ್ಡ ನೀರಾವರಿ ಕಾಂಗಾರಿಗಳನ್ನು ನಾವು ತೆಗೆದುಕೊಂಡರೆ ಮೊದಲನೇ ಪಂಚವಾರ್ಷಿಕ ಯೋಜನೆಯಿಂದ ಹಿಡಿದು ಇದುವರೆಗೂ ಬಂದಿರತಕ್ಕ ದೊಡ್ಡ ದೊಡ್ಡ ಕಾಂಗಾರಿಗಳನ್ನೆಲ್ಲಾ ಪ್ಲಾನಿಂಗ್ ಕಮಿಷನ್‌ನವರು ಅವರ ಹಣವನ್ನು ಕೊಟ್ಟು ಮಾಡಿಸಿದ್ದಾರೆ. ಭಾಕ್ರಾನಂಗಲ್ ತೆಗೆದುಕೊಳ್ಳಿ, ಇನ್ನಿತರ ಕಾಂಗಾರಿಗಳನ್ನು ತೆಗೆದುಕೊಂಡರೆ ಅದು ಕೇಂದ್ರದ ಹಣದಿಂದ ಬಂದಿರುವುದು. ಭದ್ರಾ ಪ್ರಾಜೆಕ್ಟು ನಮ್ಮ ಸುದೈವದಿಂದ 1956ನೇ ನವೆಂಬರ್ ಒಂದನೆ ತಾರೀಖಿನ ಒಳಗೆ ಕಟ್ಟಿ ಪೂರೈಸಲಾಗಿತ್ತು, ಇನ್ನೇನೂ ಉಳಿದಿರಲಿಲ್ಲ. ಇತ್ತೀಚೆಗೆ 1956ನೇ ನವೆಂಬರ್ ಒಂದನೇ ತಾರೀಖಿನಿಂದ ಯಾವ ಕಾಂಗ್ರೆಸ್ ಆಡಳಿತ ಶ್ರೀಮಾನ್ ನಿಜಲಿಂಗಪ್ಪನವರ ನೇತೃತ್ವದಲ್ಲಿ ಬಂದು ಅವರು ನೀರಾವರಿ ಕಾಂಗಾರಿಗಳ ಕಡೆಗೆ ಕೇಂದ್ರದ ಗಮನವನ್ನು ಸೆಳೆದಿದ್ದರೂ ಕೂಡ ಇದುವರೆಗೂ ದೇಶದಲ್ಲಿ ಏನು ಕಾಂಗಾರಿಗಳು ಆಗಬೇಕಾಗಿತ್ತೋ—ಕೃಷ್ಣಾ ಪ್ರಾಜೆಕ್ಟಾಗಲಿ, ಕಾವೇರಿ ಬೇಸಿನ್‌ನಲ್ಲಾಗಲೀ ಯಾವ ಒಂದು ಕಾಂಗಾರಿಯೂ ಕೂಡ ಆಗಿಲ್ಲ. ಆ ಕೆಲಸಗಳನ್ನು ತೆಗೆದುಕೊಂಡಿದ್ದರೆ ಇಷ್ಟು ಹೊತ್ತಿಗೆ ಅವೆಲ್ಲಾ ಪೂರೈಸಿ ಇನ್ನೂ ಅಷ್ಟು ದುಡ್ಡು ನಮ್ಮ ದೇಶದಲ್ಲಿ ಉಳಿಯುತ್ತಿತ್ತು. ದೊಡ್ಡ ಲೋಪ ಮಾಡಿದ್ದಾರೆ. ಸ್ಥೂಲವಾಗಿ ವಿಚಾರ ಮಾಡಿದರೆ ದುಡ್ಡಿಲ್ಲ ಅಂದರೂ ಕೂಡ ತಕ್ಕಡಿ ಹಿಡಿದು ವ್ಯಾಪಾರ ಮಾಡತಕ್ಕ ಕಸುಬಿನವರನ್ನು ಬೆಳೆಸಲಿಕ್ಕೆ ಪ್ರಯತ್ನ ಮಾಡಿದರೇ ಹೊರತು ನೇಗಿಲ ಯೋಗಿಯ ಕಡೆಗೆ ಅವರು ಪ್ರಯತ್ನ ಮಾಡಲಿಲ್ಲ. ನೇಗಿಲ ಎತ್ತನ್ನು ಯಾವಾಗ ನೋಡಿಕೊಳ್ಳುತ್ತಾ

ಇದ್ದಾರೆ ಎಂದರೆ ಓಟಿಗೆ ಹೋದಾಗ ಮಾತ್ರ. ಒಂದು ಸೊಗಸಾದ ಹೋರಿ ಹಿಡಿದು ನೇಗಿಲಿಗೆ ಕಟ್ಟಿ ನೋಡುತ್ತಾರೆಯೋ ಹೊರತು ಈ ಹಣವನ್ನು 500 ಕೋಟಿ ರೂಪಾಯಿಗಳ ಸಾಲವನ್ನು ಮಾಡಿ ಯಾವ್ಯಾವುದಕ್ಕೆ ಹಾಕಿದ್ದಾರೆ ! ಯಾವ್ಯಾವ ಕಾಂಗಾರಿಗಳಿಗೆ ಹಾಕಿದ್ದಾರೆ ಎಂಬುದನ್ನು ನೋಡಿದರೆ ಬಹುಭಾಗ ಸಹಕಾರ ಸಂಘಗಳಲ್ಲೇ ತುಂಬಿ ಹೋಗಿವೆ, ಬಹುಭಾಗ ವ್ಯಾಪಾರದ ಕಂಪೆನಿಗಾಗಿ ಸಾಲ ಕೊಟ್ಟೂ ಕೊಟ್ಟೂ ಭರ್ತಿಯಾಗಿ ಹೋಗಿದೆ. ಇಲ್ಲಿ ಅಸಿಟೈಟ್ ಫ್ಯಾಕ್ಟರಿ ಎನ್ನುವುದೊಂದಿದೆ. ಅದು ಸತ್ತು ಹೋಗಿ ಎಷ್ಟೋ ಕಾಲವಾಯಿತು. ಹಾಗಿದ್ದರೂ ಇನ್ನೂ ಮೊನ್ನೆತಾನೆ ಅದಕ್ಕೆ 90 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮೊದಲು ಅದಕ್ಕೆ 40 ಲಕ್ಷ ಕೊಟ್ಟಿದ್ದರು. ಇತ್ತೀಚೆಗೆ ಮತ್ತೆ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಯಾವಾಗ ಲಾಸಾಯಿತು, ಏಕೆ ಲಾಸಾಯಿತು ಎಂಬುದನ್ನು ಕಂಡವರು ಯಾರು ? ಇವರು ಅವರನ್ನು ತಬ್ಬಿಕೊಂಡಿದ್ದಾರೆ; ಅವರು ಇವರನ್ನು ತಬ್ಬಿಕೊಂಡಿದ್ದಾರೆ. ಯಾರನ್ನೂ ಯಾರೂ ಬಿಡಿಸಿಕೊಳ್ಳುವಂತಿಲ್ಲ. ಹೀಗೆ ಇವರು ಸಿಕ್ಕಿದಂತೆ ಈ ಕೈಗಾರಿಕಾ ರಂಗದಲ್ಲಿ ಹಣವನ್ನು ಹಾಕಿ ಹಾಳು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇವರು ನೀರಾವರಿ ಯೋಜನೆಗಳಿಗೆ ಯಾವ ಪ್ರಾಶಸ್ತ್ಯವನ್ನೂ ಕೊಡುತ್ತಿಲ್ಲ. ಹಿಂದೆ ಅದೇನೋ ಭದ್ರಾ ಪ್ರಾಜೆಕ್ಟನ್ನು ಮಾಡಿದ್ದಾಯಿತು. ಅಲ್ಲಿಂದೀಚೆಗೆ ಯಾವುದಾಗಿದೆ ! ಇವರ ಗಮನವೆಲ್ಲಾ ಆ ಟ್ರೇಡ್ ಓರಿಯಂಟೇಷನ್ ಕಡೆಗೇ ಓಡುತ್ತಿದೆ. ನಾವು ಇಲ್ಲಿಯವರೆಗೂ ಬೇಕಾದಷ್ಟು ಹೇಳಿದ್ದಾಯಿತು. ಆದರೆ ಇವರೇನೂ ದಾರಿಗೆ ಬರುವಂತೆ ಕಾಣುವುದಿಲ್ಲ. ಬಾಯಲ್ಲಿ ಬೇಕಾದಷ್ಟು ಹೇಳುತ್ತಾರಷ್ಟೇ. ಆದರೆ ನಾನಾಗಲೇ ಹೇಳಿದಂತೆ ಇವರು ನಾಳೆ ದಿವಸ ಛಾರ್ಜ್ ಷೀಟನ್ನು ಕೊಟ್ಟು ಹೋಗುವಾಗ ನಮಗೆ ನಿಲ್ ಬ್ಯಾಲೆನ್ಸ್ ಷೀಟನ್ನು ಕೊಡುತ್ತಾರೆ, ಇವರು ನಮ್ಮ ಕೈಗೆ; ಆ ಚಿಕ್ಕನಾಯಕನಹಳ್ಳಿಯ ಕಪ್ಪನ್ನೇ ಕೊಡುವುದು ಎಂಬುದನ್ನು ಅನೇಕಾವರ್ತಿ ಹೇಳಿದ್ದೇನೆ. ಈಗಲೂ ನಾನು ಅದನ್ನೇ ಹೇಳುತ್ತಿದ್ದೇನೆ. ಆ ಕಾಲವೂ ಕೂಡ ಸಮೀಪಿಸುತ್ತಿದೆ. ಖಜಾನೆಯಲ್ಲಿದ್ದ, ಇವರು ಅಧಿಕಾರಕ್ಕೆ ಬರುವ ಮುನ್ನ ಇದ್ದ ಆ 500 ಕೋಟಿ ರೂಪಾಯಿಗಳನ್ನು ಹೇಗೆ ಪೋಲು ಮಾಡಿದರು ! ದೇಶದಲ್ಲಿ ನೀರಾವರಿ ಬಾಬಿಗೆಷ್ಟು ಹಣಬೇಕು ಕೈಗಾರಿಕೆಗಳಿಗೆಷ್ಟು ಹಣಬೇಕು ಎಂಬುದನ್ನು ನೋಡಿ ಅದನ್ನು ಉಪಯೋಗ ಮಾಡಿದರೇ ! ಇವರು ಯಾವ ಒಂದು ಆಲೋಚನೆಯೂ ಇಲ್ಲದೆ ಹಣವನ್ನೆಲ್ಲಾ ಪೋಲು ಮಾಡಿದ್ದಾರೆ. ಇದು ನಮ್ಮ ದೇಶದ ದೌರ್ಭಾಗ್ಯ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ಹಿಂದೆ ದೇಶದಲ್ಲಿ ದೊಡ್ಡ ದೊಡ್ಡ 125 ಕೆರೆಗಳನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದೂ ಹೇಳಿದ್ದೇ. ಒಂದೊಂದು ಕೆರೆಗೂ ಇವರು 10 ವರ್ಷ, 15 ವರ್ಷಗಳನ್ನು ತೆಗೆದುಕೊಂಡು ಒಂದೊಂದು ಕೆರೆಗೂ ಒಂದು ಲಕ್ಷ, ಎರಡು ಲಕ್ಷ ಅಥವಾ ಮೂರು ಲಕ್ಷ ರೂಪಾಯಿಗಳಂತೆ ಖರ್ಚು ಮಾಡುತ್ತಾ ಹೋದರೆ ಆ ಕೆರೆಗಳು ಇನ್ನು 40 ವರ್ಷಗಳಾದರೂ ಆಗುವುದಿಲ್ಲ. ಆದರೆ 1974ರೊಳಗೆ ಕಾವೇರಿ ನದೀ ನೀರನ್ನು ಉಪಯೋಗ ಮಾಡಿಕೊಳ್ಳದೆ ಇದ್ದರೆ ನಾವು ಬಹಳ ಅಪಾಯಕ್ಕೆ ಈಡಾಗುತ್ತೇವೆ. ದೇಶಕ್ಕೆ ಎಂಥಾ ದುರ್ದೈವ ಬಂತೆಂದು ನಾವು ಕಣ್ಣು ಕಣ್ಣು ಬಿಡುತ್ತಿದ್ದರೆ ಈ ಆಳಿತ ನಡೆಸತಕ್ಕವರಿಗೇನಾದರೂ ಭಯವಿದೆಯೇ ? ಬಾಯಲ್ಲಿ ಹೇಳಿದ್ದೂ ಹೇಳಿದ್ದೇ. ಆದರೆ ನಾನು ಇವರಿಗೊಂದು ನೇರವಾದ ಪ್ರಶ್ನೆಯನ್ನು ಕೇಳುತ್ತೇನೆ ! ಇವರು ಈ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳಬೇಕೇ ಬೇಡವೇ ಎನ್ನುವುದಕ್ಕಿಂತ ಮೊದಲು ನಾನು ಕೇಳುತ್ತಿರುವುದು ಈ ಹಿಂದೆ ಹಣಕಾಸಿನ ಸಚಿವರಾಗಿದ್ದ ಶ್ರೀ ಬಿ. ಡಿ. ಜತ್ತಿಯವರು ಒಂದು ಸಾರ್ತಿ ಮಂಗಳೂರಲ್ಲಿ ಮಾತನಾಡುತ್ತ ಇನ್ನು ನಮ್ಮ ಖಜಾನೆಯಲ್ಲಿ ಇರತಕ್ಕ ದುಡ್ಡು 2 ತಿಂಗಳು ನೌಕರರಿಗೆ ಸಂಬಳವನ್ನು ಕೊಡುವಷ್ಟು ಮಾತ್ರ ಇದೆ. ನನಗೆ 40 ಕೋಟಿ ಓವರ್‌ಡ್ರಾಫ್ಟ್ ಮಾತ್ರ ರಿಜರ್ವ್ ಬ್ಯಾಂಕಿನಿಂದ ಸಿಕ್ಕಿದ್ದು, ಇನ್ನು ಖಜಾನೆಯಲ್ಲಿ ಹಣವಿಲ್ಲ ಎಂದು ಹೇಳಿದ್ದರು. ಹಿಂದೆ ಇದ್ದ ಆಡಳಿತಗಾರರು ಹೀಗೆಲ್ಲಾ ಮಾಡುತ್ತಿರಲಿಲ್ಲ. ಆ ವಿಚಾರವನ್ನು ಇಲ್ಲಿ ಅನೇಕಾವರ್ತಿ ಹೇಳಿದ್ದೇನೆ. ಹಿಂದೆ ಆಡಳಿತಗಾರರು ಅವರಿಗೆ ಒಂದು ರೂಪಾಯಿ ವರಮಾನ ಬಂದರೆ ಅದರಲ್ಲಿ 12 ಆಣೆ ಖರ್ಚು ಮಾಡಿ ಇನ್ನೂ ನಾಲ್ಕು ಆಣೆಗಳನ್ನು ತಿರುಪತಿ ತಿಮ್ಮಪ್ಪನ ಮುಡುಪೆಂದು ಹೇಳಿ ಹಾಗೇ ಗಂಟು ಕಟ್ಟಿ ಇಡುತ್ತಿದ್ದರು. ಈಗಿನ ಆಡಳಿತಗಾರರು ಹಾಗಲ್ಲ. ಇವರಿಗೆ ಒಂದು ರೂಪಾಯಿನ ವರಮಾನ ಬಂದರೆ ಇವರ ಬಡ್ಜೆಟ್ ಖರ್ಚು 2 ರೂಪಾಯಿ ಇರುತ್ತೆ. ಹೀಗೆ ಇವರು ಸಾಲ ಮಾಡಿ ವ್ಯವಹಾರ ಮಾಡತಕ್ಕ ಜನರು. ಈ ಆಡಳಿತವೂ ಕೂಡ ಒಂದು ಹಿಂದೂ ಅವಿಭಕ್ತ ಕುಟುಂಬವಿದ್ದ ಹಾಗೆ ಇವರು ಸಾಲ ಮಾಡಿ ತಿಂದು ಹಾಕಿದನಂತರ ಇದನ್ನು ತೀರಿಸತಕ್ಕವರು ಯಾರು ! ಹಿಂದೂ ಅವಿಭಕ್ತ ಕುಟುಂಬದ ಮೇಲೆ ದಾವಾ ಹಾಕಿದಾಗ ಸಾಲಗಾರನ ಮಕ್ಕಳು ಈ ಸಾಲದ ವಿಷಯ ನಮಗೆ ಗೊತ್ತಿಲ್ಲ, ನಮ್ಮ ಅಪ್ಪ ಜೂಜಾಡುವುದಕ್ಕೋ ಅಥವಾ ವ್ಯಭಿಚಾರಕ್ಕೋ ಮಾಡಿದಂಥ ಸಾಲ ಇದು. ಇದನ್ನು ನಾವು ಕೊಡಬೇಕಾದ್ದಿಲ್ಲ. ಇದು ನಮಗೆ ಗೊತ್ತಿಲ್ಲ ಎಂದು ಹೇಗೆ ಆ ಅವಿಭಕ್ತ ಕುಟುಂಬದವರು ಕೋರ್ಟಿನಲ್ಲಿ ತಕರಾರನ್ನು ಹಾಕುತ್ತಾರೋ ಹಾಗೇ ಇಲ್ಲಿಯೂ ಮಾಡತಕ್ಕ ಪ್ರಸಂಗ ಬರಬಹುದು.

(ಶ್ರೀ ಎಚ್. ಸಿದ್ದವೀರಪ್ಪ)

ಇವರು ಮಾಡಿರತಕ್ಕ ಸಾಲಗಳನ್ನು ರೆಪ್ಯುಡಿಯೇಟ್ ಮಾಡಿದರೆ ಮಾತ್ರ ನಮಗೆ ಉಳಿಗಾಲ. ಇಲ್ಲದೇ ಹೋದರೆ ನಾವು ಸಾಲ ತೀರಿಸುವುದಕ್ಕಾಗುವುದಿಲ್ಲ. 500 ಕೋಟಿ ರೂಪಾಯಿಗಳಷ್ಟು ಸಾಲ ಮಾಡಿ ಹಣ ಖರ್ಚು ಮಾಡಿದರೂ ನೀರಾವರಿ ಕಾಮಗಾರಿ ಇಲ್ಲ. ರೈತರ ಕಡೆ ಲಕ್ಷವಿಲ್ಲ. ಯಾರು ಬೇರೆ ರೀತಿಯಿಂದ ಪ್ರತಿಭಟನೆ ಮಾಡುತ್ತಾರೋ ಅಂತಹಕಡೆ ಇವರ ಗಮನ ಹೋಗುತ್ತದೆ. ಸೇಕಡ 80 ರಷ್ಟು ಇರುವ ರೈತರಿಗೆ ಸೋಷಿಯಲ್ ಆಂಡ್ ಇಕನಾಮಿಕ್ ಬೆನಿಫಿಟ್ ಮತ್ತು ಸೋಷಿಯಲ್ ಅಂಡ್ ಇಕನಾಮಿಕ್ ಅಡ್ವಾನ್ಸ್‌ಮೆಂಟಿಗೆ ಎಷ್ಟು ಹಣ ಖರ್ಚು ಮಾಡಿದ್ದಾರೆಂಬ ಬಗ್ಗೆ ಸರ್ಕಾರದವರು ಯಾವರೀತಿಯಾಗಿ ಜವಾಬು ಕೊಡುತ್ತಾರೆಂಬುದನ್ನು ನಾವು ಖುದ್ದಾಗಿ ನೋಡಬೇಕಾಗುತ್ತದೆ. ಇದನ್ನು ನಾನು ಬಹಳ ಸಂಕಟದಿಂದ ಹೇಳಬೇಕಾಗಿದೆ. ಇದು ಮೈಸೂರಿನ ದುರ್ದೈವ. ಇಂತಹ ಕೆಟ್ಟ ಸರ್ಕಾರ ಬೇರೆ ದೇಶದಲ್ಲಿದ್ದಿದ್ದರೆ ಅಂಗೀಸನ್ ಸರ್ಕಾರಕ್ಕೆ ಯಾವರೀತಿಯಲ್ಲಿ ಮುಕ್ತಿಯಾಯಿತೋ ಆರೀತಿ ಮುಕ್ತಿಯಾಗುತ್ತಿತ್ತು. ಪ್ರಜಾಪ್ರಭುತ್ವದಲ್ಲಿ ಕೈಕಟ್ಟಿಕೊಂಡು ಕುಳಿತುಕೊಂಡು ಇವರು ಮಾಡುವ ವ್ಯವಹಾರಗಳನ್ನು ನಾವು ನೋಡಬೇಕಾಗಿದೆ. ಯಾರು ಈ ಸರ್ಕಾರಕ್ಕೆ ಬ್ಲೈಂಡಾಗಿ ಕಣ್ಣುಮುಚ್ಚಿಕೊಂಡು ಸಹಾಯ ಮತ್ತು ಸಹಕಾರ ಕೊಡುತ್ತಾರೆ ? ಕೈಗಾರಿಕೆಗಳಿಗೆ ಬೇಕಾದಷ್ಟು ದುಡ್ಡು ಕೊಟ್ಟಿದ್ದೇವೆ. ಅವೂ ಸಹ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿಲ್ಲ. ಕೆರೆ ಕಟ್ಟುವುದಕ್ಕೆ ದುಡ್ಡು ಇಲ್ಲವೆಂದು ಹೇಳುತ್ತಾರೆ. ಇನ್ನು ಈ ಕಾನೂನು ತಂದಿರುವ ರೀತಿ ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಆಂಧ್ರದ ಆಕ್ಟ್ ನನಗೆ ಸಿಗಲಿಲ್ಲ. ಅಲ್ಲಿ ಕಾಂಪ್ರಹೆನ್ಸಿವ್ ರೀತಿಯಲ್ಲಿ ಕಾನೂನು ಇದೆ. ಮಾನ್ಯ ಶ್ರೀ ಚನ್ನಬಸಪ್ಪನವರು ಈ ಕಾಯಿದೆಗೆ ಇನ್‌ಸ್ಪಿರೇಷನ್ ಆದರು ಎಂದು ನನಗೆ ಕಾಣುತ್ತದೆ. ಹೋದಸಾರಿ ಇದು ಬಂದಾಗ್ಗೆ ದುಡ್ಡು ಇಲ್ಲವೆಂದು ಹೇಳಿದರು. ದುಡ್ಡು ಬೇಕಾದರೆ ಇವರು ಆ ಕೆಲಸ ಮಾಡುತ್ತೇವೆಂದು ಹೇಳಿದರೆ ಅಡ್ವಾನ್ಸಾಗಿ ದುಡ್ಡು ಕೊಡಿಸುತ್ತೇವೆ, ನಿಮಗೆ ಏನು ಬೇಕಾದರೂ ಮಾಡುತ್ತೇವೆ ಎಂದು ಹೇಳಿದ್ದು ಈ ಕಾನೂನನ್ನು ಜಾರಿಗೆ ತರಲಿಕ್ಕೆ ದಾರಿಯಾಯಿತೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ನಾನು ಯಾವತ್ತೂ ನನಗೆ ತಿಳಿದಮಟ್ಟಿಗೆ ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಡುತ್ತೇವೆಂದು ಹಿಂದೆ ಹೇಳಲಿಲ್ಲ. ಮುಂದೆ ಹೇಳುವುದಿಲ್ಲ. ಹಿಂದೆ ಮುಖ್ಯಮಂತ್ರಿಗಳು ಹೇಳುತ್ತಿದ್ದರು. ಮಾನ್ಯ ಶ್ರೀ ನಿಜಲಿಂಗಪ್ಪನವರು ಆ ರೀತಿ ಹೇಳಿದ್ದಾರೆಂದು ಇಲ್ಲಿ ಹೇಳುವುದಕ್ಕೆ ಬದಲು ಚನ್ನಬಸಪ್ಪನವರು ಎಂದು ಹೇಳಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ. —ಇನ್ನು ಕಾವೇರಿ ಪ್ರಾಜೆಕ್ಟ್ ಕಟ್ಟುವ ಬಗ್ಗೆ ನಮಗೇನೂ ಪ್ರತಿಬಂಧಕವಿಲ್ಲ ನಾವು ಕಟ್ಟಿಯೇ ಕಟ್ಟುತ್ತೇವೆಂದು ಮಾನ್ಯ ಶ್ರೀ ಡಿ. ಎಂ. ಸಿದ್ದಯ್ಯನವರು ಹೇಳಿದರು ಅಲ್ಲದೆ ಕನ್‌ಸ್ಟ್ರಕ್ಟಿವ್ ಕ್ರಿಟಿಸಿಸಮ್ಸ್ ಇರಬೇಕೆಂದು ಹೇಳಿದರು. ಇದನ್ನು ಯಾವ ರೀತಿ ಮಾಡಬೇಕೆಂಬ ಪ್ರಶ್ನೆಯನ್ನು ಇವತ್ತು ತಂದಿಟ್ಟಿದ್ದಾರೆ. ಇದಕ್ಕೊಂದು ಉದಾಹರಣೆ ಹೇಳಬೇಕಾಗಿದೆ. ಒಂದು ಮನೆಯಲ್ಲಿ ಒಬ್ಬ ಮಗ ಮದುವೆಗೆ ಇದ್ದಾನೆ. ಆದರೆ ಆ ಮನೆಯಲ್ಲಿ ಮದುವೆ ಮಾಡುವ ಯೋಗ್ಯತೆ ಇಲ್ಲ. ಆಗ ಅಪ್ಪ ಆ ಮಗನನ್ನು ಯಾರ ಮನೆಯಲ್ಲಾದರೂ ಸಂಬಳಕ್ಕೆ ಇಟ್ಟು ಮದುವೆ ಮಾಡುತ್ತೇನೆಂದು ಹೇಳಿದನಂತೆ. ಹಾಗೆ ಸಂಬಳಕ್ಕೆ ಇಟ್ಟು ಮದುವೆ ಮಾಡಬೇಕೆನ್ನುವ ಪರಿಸ್ಥಿತಿಯಲ್ಲಿ ನಮ್ಮ ರೈತರು ಇಲ್ಲ. ನಿಮಗೆ ಏನೋ ಆತುರತೆ ಇದೆ.

3-30 P. M.

ಅದಲ್ಲದೆ, ಇವತ್ತಿನ ದಿವಸ ನಮಗೆ ನೀರು ಬೇಕಾಗಿದೆ. ರೈತರು ಬದುಕಬೇಕಾಗಿದೆ. ಒಂದು ಕಡೆ ಜನಸಂಖ್ಯೆಯ ಒತ್ತಡ ಇದೆ, ಒಂದು ಕಡೆ ಜನಗಳಲ್ಲಿ ಬಹಳ ಹೆಚ್ಚಿನ ಆಸಕ್ತಿ ಇದೆ. ಮೈಸೂರು ರಾಜ್ಯದಲ್ಲಿ ಯಾವ ಕಡೆಗಳಲ್ಲೂ ಇಲ್ಲದಿರತಕ್ಕ ತೊಂದರೆಗಳಿವೆ. ರೈತರು ಪ್ರತಿ ಸಾರಿ ಮೋಡಗಳನ್ನು ನೋಡುತ್ತಿದ್ದಾರೆ. ಕೆಲವುಸಾರಿ ಎನಿಸುತ್ತದೆ, ನೀರು ಬಂದರೆ ರೈತರು ಯಾವರೀತಿಯಲ್ಲಿ ಇರಬಹುದೆಂದು. ಕೇವಲ ಭದ್ರಾ ಪ್ರಾಜೆಕ್ಟನ್ನು ನೋಡಿದರೆ, ದೇವರು ಕೊಟ್ಟಿರತಕ್ಕ ನೀರನ್ನು ಅವರಿಗೆ ಕೊಟ್ಟರೆ ಅಲ್ಲಿ ಸುಖವಾದ ಉತ್ಪನ್ನವಾಗುವುದಕ್ಕೆ ಅನುಕೂಲವಾಗುತ್ತದೆ. ಇವತ್ತಿನ ದಿವಸ ಮೈಸೂರು ರಾಜ್ಯದಲ್ಲಿ ಈ ನೀರಾವರಿ ಕಾಮಗಾರಿಗಳನ್ನು ಮಾಡಬೇಕಾದರೆ, ಸರ್ಕಾರದವರು ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಡಿ ಎಂದು ಹೇಳುತ್ತಿದ್ದಾರೆ. ಶ್ರೀ ಮಾನ್ ಪುಟ್ಟಸ್ವಾಮಿಯವರು ಈ ಮಸೂದೆಯನ್ನು ಮಂಡನೆ ಮಾಡಬೇಕಾದರೆ, ಅವರಿಗೆ ಬಹುಶಃ ಮಂಡಿಸಲು ಮನಸ್ಸಿರಲಿಲ್ಲವೆಂದು ಕಾಣುತ್ತದೆ, ಅವರು ''ನಾನು ಏನು ಹೇಳಲಿ, ಯಾವುದು ಬಿಡಲಿ'' ಎಂದು ಹೇಳಿದರಲ್ಲದೆ; ಮನಸ್ಫೂರ್ತಿಯಾಗಿ ಅವರ ಭಾಷಣ ಬರಲಿಲ್ಲ, ಇದರಿಂದ ನನಗನಿಸುತ್ತದೆ ಏನೆಂದರೆ, ಇವರಲ್ಲೇ

ಭಿನ್ನಾಭಿಪ್ರಾಯ ಇದೆಯೋ ಏನೋ ಎಂದು. ಏನೋ ವಿರೋಧಪಕ್ಷದವರು ಗಲಾಟೆ ಮಾಡುತ್ತಾರೆ ಅದಕ್ಕೆ ತಂದಿದ್ದಾರೋ ಅಥವಾ ಒಳ್ಳೆಯ ಸದುದ್ದೇಶದಿಂದ ತಂದಿದ್ದಾರೋ, ಅದನ್ನು ಒಪ್ಪಿಕೊಳ್ಳಬೇಕೋ, ಎಂದು ನನಗಂತೂ ಅರ್ಥವಾಗುತ್ತಿಲ್ಲ. ಇದರಲ್ಲಿ ಕ್ಲಾಜ್ 3(ಎ) ಹಾಕಿದ್ದಾರೆ, ಅದು ಸರ್ವಥಾ ಸರಿಯಲ್ಲ. ಒಂದು ತತ್ವವನ್ನು ನಾನು ಒಪ್ಪಿಕೊಳ್ಳುತ್ತೇನೆ, ನಮ್ಮ ಪಕ್ಷದವರೂ ಒಪ್ಪಿಕೊಳ್ಳುತ್ತಾರೆ ಏನೆಂದರೆ, ನೀವು ಒಳ್ಳೆಯ ರೀತಿಯಿಂದ ಕೆಲಸ ಮಾಡಿದರೆ, ನಮ್ಮ ಸಹಾಯ ಇದ್ದೇ ಇದೆ. ನಿಮಗೆ ಕೈಲಾದ ಸಹಾಯವನ್ನು ನಾವು ಮಾಡುತ್ತೇವೆ. ನಿಮ್ಮ ಸ್ವಪ್ರಯತ್ನವನ್ನು ಇದರಲ್ಲಿ ಜೋಡಿಸಬೇಕು. ಈ ಮಸೂದೆಯ ಒಳ ತತ್ವವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಮಸೂದೆಯಲ್ಲಿ ಇರತಕ್ಕ ರೀತಿಯಲ್ಲಿ ಹೋಗುವುದಕ್ಕಾಗುವುದಿಲ್ಲ. ಮಾನ್ಯ ಮಂತ್ರಿಯವರು ಹೇಳುತ್ತಾರೆ, ಪ್ರಾಜೆಕ್ಟಿನ ಅಭಿವೃದ್ಧಿಯನ್ನು ತಿಳಿದುಕೊಂಡು ಇದನ್ನು ಮಾಡಿದ್ದು ಎಂದು. ಜನರಲ್ಲಿ ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೇಳುತ್ತಿದ್ದೇವೆ ಎನ್ನುವುದಾದರೆ, ಜನರ ಅಭಿಪ್ರಾಯವೂ ಏನೆಂಬುದನ್ನು ತಿಳಿದುಕೊಳ್ಳುವುದು ಮುಖ್ಯ. ಅದಕ್ಕೂ ಸಹ ಸರ್ಕಾರದವರು ಒಪ್ಪಿದರೆ ಒಳ್ಳೆಯದು. ಒಂದು ವೇಳೆ ನಾವು ಪಬ್ಲಿಕ್ ಒಪೀನಿಯನ್ ಏನೂ ಬೇಡ ಎಂಬ ಅಭಿಪ್ರಾಯದಲ್ಲಿದ್ದರೆ, ಇದು ಸೆಲೆಕ್ಟ್ ಕಮಿಟಿಗಂತೂ ಹೋಗಲೇಬೇಕು. ಏಕೆಂದರೆ, ವಾದಗ್ರಸ್ಥವಾದ ಅನೇಕ ಅಂಶಗಳು ಇವೆ. ಇಲ್ಲಿ ಒಂದು ಕಡೆ ಡಿಸ್ಕ್ರಿಮಿನೇಷನ್ ಮಾಡುತ್ತಾರೆ. 3 (ಎ) ಯಲ್ಲಿ :

> "Notwithstanding anything in this Act, where the Government, having due regard to the relative priority of works and availability of funds, is of opinion that unless advance contribution as provided hereunder is paid by the landholders of all lands which are capable of being benefited by the completion of the construction, restoration, expansion or alteration......"

ಎಂದು ಹೇಳುತ್ತಾರೆ. ಅಂದರೆ ಸರ್ಕಾರದ ದೃಷ್ಟಿಯಲ್ಲಿ due regard to the relative priority of work ಎಂದು ಇದೆ. ಯಾರು ಇದನ್ನು ಹೇಳುವವರು ? ಯಾವ ತತ್ವದಮೇಲೆ ಇದನ್ನು ಹೇಳುತ್ತಾರೆ ? ಇಂಥ ಪ್ರಾಜೆಕ್ಟ್, ಇದು ಪ್ರಯಾರಿಟಿಮೇಲೆ, ಎಂಬುದನ್ನು ಯಾವ ಯಾರ್ಡ್‌ಸ್ಟಿಕ್ಸ್ ಮೇಲೆ ಹೇಳುತ್ತಾರೆ ! ಇದು ಮಾಡಿದ್ದು ಸರಿಯಲ್ಲ. All major irrigation projects which cost more than one crore, regardless of the fact whether they have been started or to be started or they are at some stage of progress like the Kabini, Ghataprabha, Malaprabha, Upper Krishna, or whatever it is. ಎಲ್ಲವೂ ಇದಕ್ಕೆ ಬರಬೇಕು. ಮೇಜರ್ ಪ್ರಾಜೆಕ್ಟ್ಸ್ ಏನಿವೆ, ಅವೆಲ್ಲಕ್ಕೂ ಈ ಕಾನೂನು ಅನ್ವಯಿಸಬೇಕು, ಆವಾಗ ಡಿಸ್ಕ್ರಿಮಿನೇಷನ್ ಬರುವುದಿಲ್ಲ. ಇದರ ಪ್ರಕಾರ ಪ್ರಾಜೆಕ್ಟ್ (ಎ) ಇದು ಪ್ರಯಾರಿಟಿ ಪ್ರಕಾರ ಮುಖ್ಯವಾದುದು, ಇದನ್ನು ತೆಗೆದುಕೊಳ್ಳುತ್ತೇವೆ ; ಎಂದು ಹೇಳಬಹುದು. ಈಗ ಏರಿಯಾ (ಎ) ಯಲ್ಲಿ ಪ್ರಾಜೆಕ್ಟ್ ತೆಗೆದುಕೊಂಡು 66 ಪರ್ಸೆಂಟ್ ಖರ್ಚು ಮಾಡಿದ್ದೇವೆಂದು ಹೇಳಬಹುದು. ಇನ್ನೊಂದು ಏರಿಯಾ (ಬಿ) ಯಲ್ಲಿ ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಟ್ಟರೆ ಮುಂದುವರಿಯುತ್ತೇವೆಂದು ಹೇಳಬಹುದು. ಈ ರೀತಿಯಾಗಿ ಒಬ್ಬೊಬ್ಬರಿಗೆ ಮನಸ್ಸಿನ ದ್ವೇಷ, ಮನಸ್ಸಿನಲ್ಲಿರುವ ವೈಮನಸ್ಸು ಇವುಗಳನ್ನು ಹುಟ್ಟಿಸುವುದಕ್ಕೆ ಸಾಧ್ಯವಾಗುತ್ತದೆ. ಈಗ ಆ ಕಾನೂನಿನಲ್ಲಿ ಯಾವ ಮೇಜರ್ ಪ್ರಾಜೆಕ್ಟ್ಸ್ ಇವೆ, ಅವೆಲ್ಲವನ್ನೂ ಇದಕ್ಕೆ ಅನ್ವಯಿಸಬೇಕು. 'having due regard to the relative priority' ಇದನ್ನು ಸರ್ಕಾರದವರು ಹೇಳಬಾರದು. ಆಗ ಏನಾದರೂ ಇದನ್ನು ಒಪ್ಪಿಕೊಳ್ಳಬಹುದು. ಕ್ಲಾಸ್ (ಎ) ಯಲ್ಲಿ 'ಇರಿಗೇಟಿಂಗ್ ಮೋರ್‌ದ್ಯಾನ್ 100 ಎಕರ್ಸ್' ಎಂದು ಇದೆ. ಅದು ಬೇಡವಾಗಿತ್ತು. ನಾಳೆ ನಮ್ಮ ಊರಿನಲ್ಲಿ ಒಂದು ಕೆರೆ ಕಟ್ಟಬೇಕಾದರೆ, ನೀವು ದುಡ್ಡು ಕೊಡಿ ಎಂದು ಹೇಳಬಹುದು. ಇವರು ಅನ್ಯಾಯವಾಗಿ, ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ, ಮತ್ತು ಕೈಗಾರಿಕೆಗಳನ್ನು ಮಾಡುವುದಕ್ಕೆ, ಇದಕ್ಕೆಲ್ಲಾ ನಮ್ಮ ರೈತರು ದುಡ್ಡು ಕೊಡುವುದಕ್ಕೆ ತಯಾರಾಗಿಲ್ಲ. ಈಗ ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಡಬೇಕಾದರೆ, ನಿಮ್ಮಲ್ಲಿ ಅವರಿಗೆ ನಂಬಿಕೆ ಬರಬೇಕು. ನೀವು ಹೋಗಿ ಹೇಳುವಹಾಗೆ ಇರಬೇಕು. ಇಂಥ ಕಾರಣದಿಂದ ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೇಳುತ್ತಿದ್ದೇವೆಂದು ಹೇಳಬೇಕು. ಇಷ್ಟೆಲ್ಲಾ ಕಂಟ್ರಿಬ್ಯೂಷನ್ ಕೊಡುತ್ತೇವೆಂದು ಯಾರೂ ಜನರು ಪಟ್ಟಿ ಬರೆದುಕೊಂಡು ಬರುವುದಿಲ್ಲ. ಹಳ್ಳಿಗಾಡಿನಲ್ಲಿರತಕ್ಕ ಅನೇಕ ಜಮೀನುಗಳು ಬೀಡಾಗಿವೆ. ಅವರಲ್ಲೂ ನೀವು ಎರಡನೇ ಮಾರ್ಗ ಏಕೆ ಕೇಳುತ್ತಿದ್ದೀರೆಂದರೆ, ನಿಮಗೆ ಭಯ ಬಂದಿದೆ. ಓಪನ್ ಮಾರ್ಕೆಟ್ಟಿನಲ್ಲಿ ನಿಮಗೆ ಸಾಲ ಸಿಗುತ್ತಾ ಇಲ್ಲ. ನೀವು ಬಹುಶಃ ಹೊರಗಡೆ ತೋರಿಸಬೇಕಾಗಿದೆ, ಏನೆಂದರೆ ನಮ್ಮ ಜನರಿಗೆ ಆಸಕ್ತಿ ಇದೆ, ಅವರು

(ಶ್ರೀ ಎಚ್. ಸಿದ್ಧವೀರಪ್ಪ)

ಸಹಾಯ ಮಾಡುವುದಕ್ಕೆ ಬರುತ್ತಿದ್ದಾರೆ, ಆದ್ದರಿಂದ ಕೇಂದ್ರ ಸರ್ಕಾರದವರೂ ಸಹಾಯ ಮಾಡಿ ಎಂದು. ಅಥವಾ ನೀವು ಯಾವ ರೀತಿಯಿಂದಲಾದರೂ ಹಣವನ್ನು ವಸೂಲು ಮಾಡುವುದಕ್ಕೆ ಜನಗಳ ಪ್ರಯತ್ನ ಇದೆ ಎಂಬುದನ್ನು ತೋರಿಸುವುದಕ್ಕೋಸ್ಕರ ಈರೀತಿ ಕಾನೂನನ್ನು ನಮ್ಮ ಮುಂದಿಡುವುದಕ್ಕೆ ಪ್ರಯತ್ನ ಮಾಡಿದ್ದೀರಾ ಎಂದು ನನಗನಿಸುತ್ತದೆ. ನಿನ್ನೆ ಮಾನ್ಯ ಚನ್ನಬಸಪ್ಪನವರು ಹೇಳಿದ ಹಾಗೆ ನಿಮ್ಮ ಅಡ್ವಾನ್ಸ್ ಕಂಟ್ರಿಬ್ಯೂಷನ್‌ನಲ್ಲಿ ನಿಮ್ಮ ಕೆರೆ ಆಗುವುದಿಲ್ಲ. ಮೈನರ್ ಇರಿಗೇಷನ್— ಅಂದರೆ ಮಾನ್ಯ ದೊಡ್ಡಮೇಟಿಯವರ ಇಲಾಖೆಯಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದರು, ಲಿಫ್ಟ್ ಇರಿಗೇಷನ್ ಕೆಲಸಗಳು ಕೆಲವುಕಡೆ ಚೆನ್ನಾಗಿ ಮಾಡುತ್ತಿದ್ದರು.

ಆದರೆ ಅವರಿಗೆ ಏನಾಯಿತೋ ಏನೋ ಆ ಯೋಜನೆಯನ್ನು ಈಗ ನಿಲ್ಲಿಸಿದ್ದಾರೆ. ಇವೊತ್ತು ರೈತರಿಗೆ ಸರ್ಕಾರದವರು ನೀರಾವರಿ ಸೌಲಭ್ಯವನ್ನು ಒದಗಿಸಬೇಕು ಎನ್ನುವುದಾದರೆ 100 ಎಕರೆಯಿಂದ 300 ಎಕರೆಯವರೆಗೆ ನೀರಾವರಿ ಆಗತಕ್ಕಂಥ ಕಾಮಗಾರಿಗಳನ್ನು ತೆಗೆದುಕೊಂಡು ಒಂದು ವರ್ಷಕ್ಕೆ ಒಂದು ಲಕ್ಷ ಎಕರೆಗೆ ನೀರಾವರಿ ಸೌಲಭ್ಯವನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. 100 ಎಕರೆಯಿಂದ 300 ಎಕರೆಗಳವರೆಗೆ ಇರತಕ್ಕಂಥ ನೀರಾವರಿಗಳನ್ನು ಮೈನರ್ ಇರಿಗೇಷನ್‌ನಲ್ಲಿ ಸೇರಿಸಬೇಕು. ಮೀಡಿಯಂ ಇರಿಗೇಷನ್‌ನಲ್ಲಿ ಸೇರಿಸಕೂಡದು ಎಂದು ನನ್ನ ಅಭಿಪ್ರಾಯ.

ಈಗ ಈ ಮಸೂದೆಯ ಪ್ರಕಾರ ಯಾವುದಾದರೂ ಒಂದು ಪ್ರಾಜೆಕ್ಟಿನ ಕೆಲಸವನ್ನು ತೆಗೆದುಕೊಳ್ಳಬೇಕಾದರೆ ಆ ಪ್ರಾಜೆಕ್ಟ್ ಆಗತಕ್ಕಂಥ ಪರಿಯಾದಲ್ಲಿರತಕ್ಕ ಜನರಲ್ಲಿ ಶೇಕಡಾ 66 ಜನರು ಅದಕ್ಕೆ ಒಪ್ಪಿಗೆಯನ್ನು ಕೊಟ್ಟು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಅವರು ಮುಂದೆ ಬರಬೇಕು. ಇನ್ನು 66 ಪರ್ಸೆಂಟ್ ಜನಗಳು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಮುಂದೆ ಬಾರದಿದ್ದರೆ, ಆ ಪ್ರಾಜೆಕ್ಟಿನ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಾವಿಜನ್ ಇಲ್ಲ. 66 ಜನಗಳು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಒಪ್ಪಿಕೊಂಡು ಆ ಪ್ರಾಜೆಕ್ಟಿನ ಕಾಮಗಾರಿಯನ್ನು ತೆಗೆದುಕೊಳ್ಳಿ ಎಂದು ಜನಗಳು ಸರ್ಕಾರಕ್ಕೆ ಹೇಳಿದರು ಆಗ ಸರ್ಕಾರದವರು ಆ ಪ್ರಾಜೆಕ್ಟಿನ ಕಾಮಗಾರಿಯನ್ನು ಮಾಡುತ್ತೇವೆಂದು ಹೇಳಬೇಕಾಗಿದ್ದರೆ ಆ ಬಗ್ಗೆ ಸರ್ಕಾರದವರು ನೋಟಿಫಿಕೇಷನ್ ಹೊರಡಿಸುತ್ತಾರೆ, ಆಗ ಕೆಲಸವನ್ನು ಪ್ರಾರಂಭ ಮಾಡುತ್ತಾರೆ. ಆದರೆ ಆ ಪ್ರಾವಿಜನ್‌ನಲ್ಲಿ ಇಷ್ಟೇ ವರ್ಷಗಳಲ್ಲಿ ಆ ಪ್ರಾಜೆಕ್ಟಿನ ಕಾಮಗಾರಿಯನ್ನು ಪೂರೈಸುತ್ತೇವೆ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅಂಥಾ ಒಂದು ಪ್ರಾವಿಜನ್ ಇದರಲ್ಲಿ ಇಲ್ಲ. ಆ ಬಗ್ಗೆ ಈ ಮಸೂದೆಯಲ್ಲಿ ಸುಮ್ಮನೆ ಮೊಗಂಆಗಿ ಹೇಳಿದ್ದಾರೆ. ಸರ್ಕಾರದವರು ಮನಸ್ಸಿನಲ್ಲಿ ಏನೋ ಒಂದು ಅಭಿಪ್ರಾಯವನ್ನು ಇಟ್ಟುಕೊಂಡು ರೈತರಿಗೆ ಹಣ ಕೊಡಬೇಕು ಎಂದು ಒಂದೇ ವಾಕ್ಯದಲ್ಲಿ ಹೇಳಿದರೆ ದುಡ್ಡು ಕೊಡುವವರು ಯಾರು ? ಆದಕಾರಣ ಇದಕ್ಕೆ ರೈತರು ಹಣ ಕೊಡಬೇಕಾಗಿಲ್ಲ. ಈ ಹಣವನ್ನು ಬ್ಯಾಂಕಿನಿಂದ ಒದಗಿಸುತ್ತಾರೆ. ಎಂದು ಸ್ಪಷ್ಟವಾಗಿ ಹೇಳಿದರೆ ಆಗ ಯಾವ ಅನುಮಾನಕ್ಕೂ ದಾರಿಇಲ್ಲ. ರೈತರೂ ತಮ್ಮ ಜಮೀನನ್ನು ಬ್ಯಾಂಕಿಗೆ ದೀಡು ಮಾಡಿಕೊಟ್ಟರೂ ಅವರ ಜಮೀನು ಅವರ ಹತ್ತಿರವೇ ಇರುತ್ತದೆ. ರೈತರಿಗೆ ಸಾಲವನ್ನು ಮಾಡುವುದು ಹೊಸದೇನೂ ಅಲ್ಲ. ಅದು ಹಳೆಯದು ಎಂದಾಗುತ್ತದೆ. ಆದರೆ ಈ ವಿಚಾರವನ್ನು ಮಸೂದೆಯಲ್ಲಿ ಏತಕ್ಕೋಸ್ಕರ ಸ್ಪಷ್ಟವಾಗಿ ಕಾಣಿಸಲಿಲ್ಲ ? ಹಣವನ್ನು ಭರ್ತಿ ಮಾಡತಕ್ಕಂಥ ಜವಾಬ್ದಾರಿ ಸರ್ಕಾರಕ್ಕೆ ಸೇರಿದೆ. ನಿಮ್ಮ ಜಮೀನನ್ನು ಬ್ಯಾಂಕಿಗೆ ದೀಡು ಮಾಡಿ ಅವರಿಂದ ಹಣವನ್ನು ತೆಗೆದುಕೊಂಡು ಪ್ರಾಜೆಕ್ಟ್ ಕಟ್ಟುತ್ತೇವೆ. ಆ ಪ್ರಾಜೆಕ್ಟಿಗೆ ಇಷ್ಟು ಹಣವನ್ನು ಖರ್ಚುಮಾಡಿ ಇಷ್ಟು ವರ್ಷಗಳಲ್ಲಿ ಕಟ್ಟುತ್ತೇವೆ ಎನ್ನುವ ವಿಷಯವನ್ನು ಇದರಲ್ಲಿ ತೋರಿಸತಕ್ಕದ್ದು ಸರ್ಕಾರದ ಜವಾಬ್ದಾರಿ. ಮತ್ತು ಬ್ಯಾಂಕಿನಿಂದ ಪಡೆಯತಕ್ಕ ಹಣ ಏನಿದೆ ಅದರ ಬಡ್ಡಿಯನ್ನು ರೈತರಮೇಲೆ ಹಾಕಕೂಡದು. ಬಡ್ಡಿಯನ್ನು ಕೊಡತಕ್ಕಂಥ ಜವಾಬ್ದಾರಿಯನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು. ಬೆಟರ್‌ಮೆಂಟ್‌ಲೆವಿ ಉದ್ದೇಶ ಏನೆಂದರೆ ರೈತನ ಜಮೀನು ಬೆಟರ್ ಆಯಿತು. ಬೆಲೆ ಜಾಸ್ತಿ ಆಯಿತು ಎಂದು ಹೇಳಿದರು ಪ್ರಾಜೆಕ್ಟಿನ ಕಟ್ಟಡ ಆಗಿ ನೀರಾವರಿ ಬರುವುದಕ್ಕೆ ಮುಂಚೆ ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಳು ಇತ್ತು. ನೀರಾವರಿ ಬಂದಮೇಲೆ ಆ ಜಮೀನಿನ ಬೆಲೆ ಜಾಸ್ತಿಯಾಗಿದೆ. ಆದ್ದರಿಂದ ನೋಲಾಸ್ ನೋಪ್ರಾಫಿಟ್ ಮೇಲೆ ಒಂದು ಎಕರೆಗೆ 300 ರೂಪಾಯಿ ಬೆಟರ್‌ಮೆಂಟ್ ಲೆವಿ ಫಿಕ್ಸ್ ಮಾಡಿದ್ದೇವೆ. ಈ ಬೆಟರ್‌ಮೆಂಟ್‌ಲೆವಿಯನ್ನ 15-20 ಕಂತುಗಳಲ್ಲಿ ತೆಗೆದುಕೊಳ್ಳಬೇಕು ಎಂದು ಮಾಡಿದ್ದೇವೆ. ಆದ್ದರಿಂದ ಈ ಬೆಟರ್‌ಮೆಂಟ್‌ಲೆವಿ 500 ರೂಪಾಯಿ ಆಗಿದೆ ಎಂದು ಹೇಳಿದ್ದಾರೆ. ಇದು ಬೆಟರ್‌ಮೆಂಟ್‌ಲೆವಿಗೆ ಸಂಬಂಧಪಟ್ಟದ್ದು. ಈಗ ಈ ಅಡ್ವಾನ್ಸ್ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್‌ಅನ್ನು

ಸರ್ಕಾರದವರು ಏತಕ್ಕೋಸ್ಕರ ಕೇಳುತ್ತಿದ್ದಾರೆ. ಸರ್ಕಾರದಲ್ಲಿ ದುಡ್ಡು ಇಲ್ಲ ಎಂದು ಇದನ್ನು ಕೇಳುತ್ತಿದ್ದಾರೆಯೋ ಎನ್ನುವ ವಿಚಾರ ಗೊತ್ತಿಲ್ಲ. ಇವುಗಳನ್ನೆಲ್ಲಾ ಪರಿಶೀಲಿಸಬೇಕಾದರೆ ಈ ಕಾನೂನನ್ನು ಆಮೂಲಾಗ್ರವಾಗಿ ಪರಿಶೀಲಿಸಬೇಕು. ಈ ಅಡ್ವಾನ್ಸ್ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಬಗ್ಗೆ ಆಂಧ್ರದಲ್ಲಿ ಯಾವ ರೀತಿ ಮಾಡಿದ್ದಾರೆ ಎಂಬುದನ್ನು ನೋಡಬೇಕಾಗಿತ್ತು. ಆದರೆ ಆ ಪುಸ್ತಕ ಸಿಕ್ಕಲಿಲ್ಲ. ಅದು ಏನೇ ಇರಲಿ ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗಬೇಕು. ಇದನ್ನು ಈಗ ಇರುವ ರೀತಿಯಲ್ಲೇ ಪಾಸು ಮಾಡುವುದು ಒಳ್ಳೆಯದಲ್ಲ. ಇದು ಸೆಲೆಕ್ಟ್ ಕಮಿಟಿಗೆ ಹೋಗಿ ಅಲ್ಲಿ ಇದನ್ನು ಕೂಲಂಕಷವಾಗಿ ನೋಡಿ ಎಲ್ಲಾ ಆಮೂಲಾಗ್ರವಾಗಿ ವಿಚಾರ ಮಾಡಿ ಸರಿಯಾದ ಒಂದು ಕಾನೂನನ್ನು ತಂದು ದೇಶಕ್ಕೆ ಉಪಕಾರ ಮಾಡಬೇಕು ಎನ್ನುವ ದೃಷ್ಟಿಯಿಂದ ಇದು ಸೆಲೆಕ್ಟ್ ಕಮಿಟಿಗೆ ಹೋಗಬೇಕು. ಈ ಮಸೂದೆಯಲ್ಲಿರತಕ್ಕ ಅನೇಕ ವಿಷಯಗಳು ಸೆಲೆಕ್ಟ್ ಕಮಿಟಿಯಲ್ಲಿ ತೀರ್ಮಾನವಾಗಬೇಕಾಗಿದೆ. ಪ್ರಾಜೆಕ್ಟುಗಳನ್ನು ಕಟ್ಟುವಾಗ ಪ್ರಯಾರಿಟಿ ಪ್ರಶ್ನೆ ಬರುವುದಿಲ್ಲ. ಎಲ್ಲಾ ಪ್ರಾಜೆಕ್ಟುಗಳನ್ನೂ ಒಂದೇ ದೃಷ್ಟಿಯಿಂದ ನೋಡಬೇಕು. ಎಲ್ಲಾ ಕಾಮಗಾರಿಗಳ ವಿಷಯದಲ್ಲಿಯೂ ಒಂದೇ ಭಾವನೆ ಇರಬೇಕು, ಹೊಸದಾಗಲೀ ಹಳೆಯದಾಗಲೀ ಮೀಡಿಯಂ ಪ್ರಾಜೆಕ್ಟ್ ಆಗಲೀ, ಮೇಜರ್ ಪ್ರಾಜೆಕ್ಟ್ ಆಗಲೀ ಎಲ್ಲಕ್ಕೂ ಒಂದೇ ಕಾನೂನುಮಾಡಿ ಕೊಂಡರೆ ಎಲ್ಲರಿಗೂ ಒಂದು ಒಳ್ಳೆಯ ಅಭಿಪ್ರಾಯ ಬರುತ್ತದೆ. ಇದು ಯೂನಿಫಾರಂ ಲಾ ಇದೆ. ಇದರಲ್ಲಿ ಡಿಸ್‌ಕ್ರಿಮಿನೇಷನ್ ಇಲ್ಲ, ಭಿನ್ನಾಭಿಪ್ರಾಯ ಇಲ್ಲ ಎಂಬುದು ಬರಬೇಕು ಈ ದೇಶವನ್ನು ಒಡೆಯದೇ ಇದು ಈಗ ಇದ್ದ ಹಾಗೆಯೇ ಒಂದೇ ರಾಜ್ಯವಾಗಿ ಇರಬೇಕು, ನಾವು ಅವಷ್ಟು ಯಾವ ರೀತಿಯ ಭಿನ್ನಾಭಿಪ್ರಾಯಕ್ಕೂ ಅವಕಾಶಕೊಡದಂತೆ ನಡೆದುಕೊಳ್ಳಬೇಕು, ನೋಡಿಕೊಳ್ಳಬೇಕು ಎನ್ನುವವರಲ್ಲಿ ನಾನೂ ಒಬ್ಬ. ಇವೊತ್ತಿನ ದಿವಸ ಕೃಷ್ಣಾಯೋಜನೆಯಾಗಲೀ, ಕಾವೇರಿಯೋಜನೆಯಾಗಲೀ ಎರಡನ್ನೂ ಒಟ್ಟಿಗೇ ಮಾಡಬೇಕು. ಕೃಷ್ಣಾಯೋಜನೆ ಎಷ್ಟು ಮುಖ್ಯವೋ, ಕಾವೇರಿ ಯೋಜನೆಯೂ ಅಷ್ಟೇ ಮುಖ್ಯ. ಆದ್ದರಿಂದ ಈ ಎರಡು ಯೋಜನೆಗಳನ್ನೂ ಕಾರ್ಯಗತ ಮಾಡಬೇಕಾಗುತ್ತದೆ. ಅಡ್ವಾನ್ಸ್ ಕಾಂಟ್ರಿಬ್ಯೂಷನ್ ವಸೂಲು ಮಾಡತಕ್ಕಂಥ ಕಾಯಿದೆ ಏನಿದೆ ಇದನ್ನೂ ಇಡೀ ದೇಶಕ್ಕೆ ಅನ್ವಯಿಸುವ ಹಾಗೆ ಮಾಡಬೇಕಾಗುತ್ತದೆ. ಈ ಮಸೂದೆಯನ್ನು ಸೆಲೆಕ್ಟ್‌ಕಮಿಟಿಗೆ ಕಳುಹಿಸಬೇಕು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ

†SRI B. P. GANGADHAR (Tumkur).—Sir, this is one of the very important Bills that has come up for discussion this time. Many senior members both from the Ruling Party as well as from the Opposition have given their valuable suggestions in this matter. To some extent I concur with the sentiments expresssd by the Hon. Member Sri D. M. Siddiah and I was impressed by the way he tried to project the lapses and deficiencies on the part of the Government in fulfilling the irrigation needs of our State. At the same time I wondered whether my friend Sri D. M. Siddaiah was speaking what he had in mind and whether he was true to his conscience. However, he said that the Bill must be passed.

Apart from that he said that this is a matter which should be taken up on war footing. I fully agree with him there because these are matters which are responsible for the development of the State. In fact, we are suffering from scarcity in every direction, especially in the food front. We are required to import huge quantities of foodgrains from outside where we are treated almost like beggars. To overcome this shartage on our food front, we have to see that every drop of water flowing down the rivers in our State is utilized to the maximum and no water is allowed to pass to another State. I wish we had a strong Government to take up this matter urgently on war footing. The example of Andhra Pradesh was quoted by our friend Sri Siddaiah. They have not spared any pains to go ahead with almost all projects whether it be Nagarjunasagar, Srisailam or any other project. They

(SRI B. P. GANGADHAR)

cared neither for the Centre's technical sanction nor for their money. They have the capacity to demand and coerce the Central Government to give them adequate funds for developing their projects. But so far as we are concerned, at every stage we are in difficulties. I do not know why. It must be because there is poor leadership or no leadership at all in our State or the persons holding the reigns of Government are incapable of getting adequate funds from the Centre or getting technical clearance for the projects. As a result of that all our projects are either half done or not at all commenced. An impression has been created that this Government is not capable of getting anything done. Have they launched any austerity measures? Have they been able to stop some of the lavish spending which is going on in every direction? Without doing any such thing, they are asking the people to give their contribution. The Government have sunk crores of rupees in certain industries which are either dying or which do not pay any return on the investment. That being the case, all the money that we are going to provide for these irrigation projects is likely to be wasted. That is our apprehension.

Before considering the details of the Bill, we want to know whether there is absolute necessity for this Bill at all. They are requesting us to pass this Bill so that they may be able to mortgage all the properties of the people. Before asking us to pass this drastic measure, they must show us sufficient justification for passing this Bill. So long as prohibition was there, we were not getting any money from excise; but now we are getting nearly Rs. 20 crores from excise. I personally feel if proper arrangements are made for auctioning the shops the Excise Department alone will fetch us more than Rs. 30 crores which is the amount required for taking up these irrigation projects. So if we try to augment the revenue from excise and if we adopt all austerity measures and tighten our belt and plug all loopholes in our spending I am sure we can get more than Rs. 30 crores which is required for taking up these irrigation projects and then there will not be any need for mortgaging all the properties of the people. This attempt at liquidation of the properties of the people only exhibits bankruptcy on the part of the Government. This Government has virtually become a bankrupt Government. Is it not shameful for Government to ask the people to mortgage their properties for this purpose to somebody else? Can they not raise this sum of Rs. 30 crores? Over and above the current revenues, they will be getting nearly Rs. 30 crores from excise from the next year and so there is no justification to ask for this contribution from the people.

Coming to the details of the Bill, I think they are very discriminatory. Even for restoration of an old tank they want contribution. Suppose there is an existing tank with 100 acres atchkat and it is breached. Our ancestors have already paid for the construction of this

tank. Even then the Government now expect the people to make their contribution for the restoration of the tank. The poor ryots are unable to make this contribution. If they do not make this contribution the Government will not restore the breached tank. This is what the Minister says here. I would say that whenever Ministers make a statement, they should make responsible statement and they should not simply say what they feel at the moment. This Bill covers not only the construction of new tanks, the repairs of old tanks but also the restoration of breached tanks or tanks which are silted. Desilting of the silted tanks is the responsibility of the Government.

4-00 P.M.

Further, the several sections that have been introduced give a long rope to the Government. They can take up on priority basis whichever tank they think fit and leave the rest. If they want to help a particular set of ryots, they can do it, and if they want to curb down they can do that also. The Government is trying to hoodwink the people by and large and they are making a legislation to suit one section of the people to the detriment of others. Therefore, there is absolutely no justification for bringing such a legislation before this House. I am of the opinion, as demanded by my other friends, that this Bill be circulated for eliciting public opinion or it may be referred to a Select Committee so that the members of the Committee sit coolly and bring in a better legislation. There is scope to bring in a better legislation on the model of other States. The present legislation is anti-social and is opposed to the interests of the ryots. I request the members to vote down this Bill.

SRI B. B. SAYANAK (Belgaum).—Mr. Speaker, Sir, I rise to strongly oppose the Mysore Irrigation (Levy of Betterment Contribution and Water rate) (Amendment) Bill, 1969. I cannot understand the policy of the Mysore Government or the intention of the Government in bringing such a rotton Bill before this House. Clause 3A of the Bill says.—

> "Notwithstanding anything in this Act, where the Government, having due regard to the relative priority of works and availability of funds, is of opinion that unless advance contribution as provided hereunder is paid by the landholders of all lands which are capable of being benefited by the completion of the construction, restoration, expansion or alteration of a work it is not possible for it,......"

By introducing this Bill, the Government is asking for advance contribution from the agriculturists or ryots. I would like to ask the Government whether it is not the duty of the Government to provide irrigation facilities to the agriculturists and provide facilities of electricity to the agriculturists for the "Grow More Food Campaign." When the agriculturists are paying land revenue, why does the

(Sri B. B. Sayanak)

Government want this advance contribution from the agriculturists ? Do the Government consider agriculturists as rich people and are getting more money for their products in the market ? I am of the opinion that the condition of the agriculturists is worse. They are ignorant and illiterate and they cannot maintain accounts. If they maintain accounts, I am sure, we will find that an agriculturist's income is only four annas a day. It is rather shameful on the part of the Government to ask money from these agriculturists, who are in a pitiable condition. Is it not the duty of the Government to abolish the Khadi Board and other like organisations, which are incurring heavy losses and thus save lot of money ? Is it not the duty of the Government to reduce the number of Ministers and other excess establishments to give some facilities to the agriculturists ? Sub-clause (6) of Clause 3 says :—

> " Where the Government commences the execution of the work or proceeds towards the completion of the uncompleted part or stage of the work, as the case may be, as specified under sub-section (4), it shall be entitled to levy and collect the advance contribution ......"

I would like to know whether the Government has started a business to give rebate in this matter ? You should not harrass the agriculturists. You are getting Central assistance and it is the bounded duty of the Government to further the needs of the agriculturists, who are poor and down-trodden.

Thank you, Sir.

† Sri D. B. KALMANKAR (Aland).—Sir, the Mysore Irrigation (Levy of Betterment Contribution and Water Rate) (Amendment) Bill, 1969, is a classic example to show how the Government has become bankrupt. It is just like saying a prodigal son having taken his share and wasted it here and there, again coming back to the house and again claiming the share from the parents. The Hon. Member Sri Siddaiah with all earnestness spoke the other day saying that the matter is very serious, we have to treat the matter on war footing and we must not take a partisan attitude. As far as this amendment Bill is concerned, I can understand the spirit behind it. But the important problem is whether this Government, which was in power for the last 20 years deserves this sympathy from the public. The Government, which has spent huge amounts just to satisfy its whims and fancies, wants to perpetuate themselves in power regardless of the real difficulties of the people, have gone on spending crores of rupees on Co-operatives, Khadi and Village Industries and so on, and have not taken any steps to check corruption among the rank and file of the party in power. Now, they have come with this Bill.

And the Government want to see that the people contribute in advance for irrigation projects which would irrigate more than 100 acres of land. I know very well how things are going on in the Public Works Department. For instance there was a scheme for constructing 23 annecuts. Each Anecut was constructed by spending 20 to 25, thousand rupees. Now notices have been issued to many persons asking them to pay contribution charges under the Act though not even a drop of water is available in their lands nor any irrigation in these lands. Still they were asked to pay their contribution. Sir, most of the works undertaken are being done in a haphazard manner and it is mainly due to the intervention of the persons in power. Wherever it is a case of helping their own persons, the Government take up such works at the cost of the State Exchequer and wherever it is a case of those who are opposed to them, they are asked to pay contribution under the Act. There are lakhs and lakhs of Rupees spent on some wells. But during last so many years I have been urging the Government to take up some works in my district. I have tabled several starred questions, in this connection, still nothing has been done. Sir majority of the ryots are poor and they cannot afford to pay the contribution as required under the Act. They do not have money even for repairs, alterations etc. This is a great injustice done to the ryots. My submission is that this bill clearly exhibits the bankruptcy and inability of the Government. If the Government is not to carry out any work or construct anecuts on lands which irrigate more than 100 acres and if such constructions have to be done only by raising contributions from the people I do not know what else the Government is going to do. Sir, My humble submission is that either this bill should be sent for eliciting public opinion as demanded by Hon. Member Sri H. N. Nanje Gowda or it should be referred to a Select Committee, so that the pros and cons of the bill may be taken into consideration and then if it is found necessary to be dropped, it may be dropped.

With these words, I conclude my speech.

† ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಈವೊತ್ತು ಈ ವಿಧೇಯಕವನ್ನು ಸರಿಯಾಗಿ ಯೋಚಿಸಿ ತಂದ ಹಾಗೆ ಕಾಣುವುದಿಲ್ಲ. ಕಾರಣ ಅಗ್ರಿಕಲ್‌ಚರ್ ಡೆಟ್ ರಿಲೀಫ್ ಬಗ್ಗೆ ಎಲ್ಲಾ ಕೋರ್ಟುಗಳಲ್ಲಿ ಬಂದಿರುವ ಅರ್ಜಿ ನೋಡಿದರೆ, ಅದು 200 ಕೋಟಿ ರೂಪಾಯಿ ತನಕ ಆಗುತ್ತದೆ. ಇನ್ನು ಸಹಕಾರ ಬ್ಯಾಂಕಿನಲ್ಲಿರುವ ಸಾಲವನ್ನು ನೋಡಿದರೆ ಸುಮಾರು 50 ಸಾವಿರ ರೂಪಾಯಿನಷ್ಟು ಸುಸ್ತಿ ಕೊಡಬೇಕಾಗಿದೆ. ಅವರು ಮಾಡಿರುವ ಎಲ್ಲಾ ಬ್ಯಾಂಕುಗಳ ಸಾಲ ನೋಡಿದರೆ ಸುಮಾರು 500 ಕೋಟಿ ರೂಪಾಯಿಗಳಷ್ಟು ಆಗುತ್ತದೆ. ಹೀಗಿರುವಾಗ ರೈತರ ಪರಿಸ್ಥಿತಿ ಏನು ಎಂದು ತಿಳಿದುಕೊಳ್ಳದೆ ಪುನಃ ಅವರಿಂದ 500 ರೂಪಾಯಿ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳೋಣ, ನೀರಾವರಿ ಕೆಲಸ ಮಾಡೋಣ ಎಂದು ಹೇಳಿದರೆ ಅದು ಕನಸು ಆಗುತ್ತದೆ. ಇದು ಕಾರ್ಯರೂಪಕ್ಕೆ ಬರಲು ಸಾಧ್ಯವಿಲ್ಲ ಎಂದು ಹೇಳಬೇಕಾಗಿದೆ. ಈವೊತ್ತು ಆಂಧ್ರದಲ್ಲಿ ದೊಡ್ಡ ನೀರಾವರಿ ಯೋಜನೆಗಳನ್ನು ಸಾಧನೆ ಮಾಡಿದ್ದಾರೆ. ಆದರಿಂದ ಅಲ್ಲಿಯ ಜನತೆಗೆ ಕಲ್ಯಾಣವಾಗಿದೆ. ಮತ್ತು ಅಲ್ಲಿ ಅವರು ಇದಕ್ಕಾಗಿ ಎಷ್ಟುಮಟ್ಟಿಗೆ ದುಡಿಮೆ ಮಾಡಿ ಇದನ್ನು ಸಾಧಿಸಿದ್ದಾರೆ ಮತ್ತು ಆ ಸರ್ಕಾರದ ನಿಲ್ಲುವು ಏನು ಎನ್ನುವುದನ್ನು ಯೋಚನೆ ಮಾಡಬೇಕು. ಅವರು ಮಾಡಿರುವುದರಲ್ಲಿ ಒಂದು ರೂಪಾಯಿಗೆ ನಾಲ್ಕಾಣೆ ಭಾಗವೂ ಕೂಡ ನಾವು ಕೆಲಸ ಮಾಡಿಲ್ಲ. ಈವೊತ್ತಿನ ದಿವಸ ಆಂಧ್ರದಲ್ಲಿ ರಸ್ತೆಗಳ ಕೆಲಸ, ಸೇತುವೆಗಳ ಕೆಲಸ, ಬಿಲ್ಡಿಂಗ್ ಕೆಲಸ ಜೊತೆಗೆ ಹಳೆ ರಸ್ತೆಗಳ ನಿರ್ಮಾಣವನ್ನು ಸಹ ನಿಲ್ಲಿಸಿ ಆ ಹಣವನ್ನು ನಾಗಾರ್ಜುನ ಸಾಗರಕ್ಕೆ ಹಾಕಿ 250 ಕೋಟಿ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ರೂಪಾಯಿಯಲ್ಲಿ ಆ ಪ್ರಾಜೆಕ್ಟನ್ನು ಕಟ್ಟಿದ್ದಾರೆ. ಇದಲ್ಲದೆ ಆ ಸರ್ಕಾರ ಇನ್ನೂ ಬೇರೆ ಬೇರೆ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿದ್ದಾರೆ. ನಮ್ಮಲ್ಲಿ ಕೋಟ್ಯಾಂತರ ರೂಪಾಯಿ ಸುರಿದು ಬಿಲ್ಡಿಂಗ್‌ಮೇಲೆ, ಸೇತುವೆಗಳಮೇಲೆ, ರಸ್ತೆಗಳಮೇಲೆ ಹಾಕಿ ವರ್ಷೇ ವರ್ಷೇ ಸಾಲ ಜಾಸ್ತಿ ಮಾಡಿಕೊಂಡಿದ್ದಾರೆ. ಇಲ್ಲಿ ಜೀವನ ಮಾಡುವುದೇ ಕಷ್ಟ ಇರುವಾಗ ನೀರಾವರಿ ಯೋಜನೆಗಳನ್ನು ಮಾಡುತ್ತೇವೆಂದು ಹೇಳಿ ಹೊರಲಾರದೇ ಇರುವ ಹೊರೆಯನ್ನು ಜನರಮೇಲೆ ಹೇರಿ ತೊಂದರೆಗಳನ್ನು ಕೊಡುತ್ತಿದ್ದೀರಿ. ಇಂಥ ಕ್ರಮ ಸಾಧುವಾದುದಲ್ಲ. ಇದು ಶುದ್ಧ ಮೋಸ, ಕಪಟ, ಎಂದು ಹೇಳುತ್ತೇನೆ. ದೇಶದಲ್ಲಿ 10 ಭಾಗ ಕೂಡ ನೀರಾವರಿ ಯೋಜನೆ ಕೈಗೊಂಡಿಲ್ಲ. ಈ ರೀತಿ ಮಾಡಿದರೆ ರೈತ ಏನೂ ಉದ್ಧಾರವಾಗುವುದಿಲ್ಲ. ಇದನ್ನು ಸರ್ಕಾರ ಮನಗಾಣಬೇಕು. 22 ವರ್ಷದ ನಂತರ ಈವೊತ್ತು ಒಂದು ಹೊಸ ಕಾನೂನು ತಂದು ರೈತನನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳಿ ನೀರಾವರಿ ಯೋಜನೆಗೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ತೆಗೆದು ಕೊಳ್ಳುವುದು ಸರಿಯಾದುದಲ್ಲ. ಆದುದರಿಂದ ನಾನು ಈವೊತ್ತಿನ ದಿವಸ ಹೇಳುವುದಾದರೆ ನಮ್ಮ ದೇಶದಲ್ಲಿ ಮುಕ್ಕಾಲುಭಾಗ ಜನಕ್ಕೆ ಜೀವನ ಮಾಡುವುದೇ ಕಷ್ಟವಾಗಿರುವಾಗ ಅಂಥವರನ್ನು 500 ರೂಪಾಯಿ ಕಾಂಟ್ರಿಬ್ಯೂಷನ್ ಕೊಡಬೇಕು ಎಂದರೆ ಸರ್ಕಾರದ ಧೋರಣೆ ಏನು ಎಂದು ಕೇಳಬೇಕಾಗಿದೆ. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಅನೇಕ ಪ್ರಾಜೆಕ್ಟ್‌ಗಳನ್ನು ಮಾಡುತ್ತೇವೆಂದು ಹೇಳಿ ಆ ಕೆಲಸಗಳು ನಾಲ್ಕನೇ ಪಂಚವಾರ್ಷಿಕ ಯೋಜನೆಯಾದರೂ ಪೂರೈಸಿಲ್ಲ. ಸುಮಾರು 15-20 ವರ್ಷವಾದರೂ ಕೂಡ ರೈತರ ಕಷ್ಟವನ್ನು ಇನ್ನೂ ಸುಧಾರಿಸಿಲ್ಲ. ಈಗ ಬ್ಯಾಂಕಿನಿಂದ 500 ರೂಪಾಯಿ ರೈತನಿಗೆ ಸಾಲ ಕೊಡಿಸಿ ಅವರಿಂದ ಪ್ರಾಜೆಕ್ಟ್ ಕಟ್ಟುತ್ತೇವೆಂದು ಹೇಳಿದರೆ ಆ ರೈತನು ಮಾಡಿರುವ ಸಾಲಕ್ಕೆ ಬಡ್ಡಿ ಕಟ್ಟಿಕೊಂಡು ಅದರ ಪ್ರತಿಫಲವನ್ನು ಪಡೆಯುವುದರೊಳಗೆ ಸಾಲ ಮಾಡಿರುವ ಜಮೀನು ಬೇರೆಯವರ ಜಮೀನು ಆಗಿರುತ್ತದೆ. ಅನೇಕ ಉದಾಹರಣೆಗಳು ತಮಗೆ ಗೊತ್ತಿದೆ. 1, 2, 3, ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಜೆಕ್ಟ್‌ಗಳ ಕೆಲಸವನ್ನು ತೆಗೆದುಕೊಳ್ಳಬೇಕಾದರೆ 300 ಕೋಟಿ ಚಿಲ್ಲರೇ ಬೇಕು ಎಂದು ಹೇಳಿದಿರಿ ಮತ್ತು ಈವೊತ್ತೂ ಕೂಡ 26 ಪ್ರಾಜೆಕ್ಟ್‌ಗಳ ಲಿಸ್ಟ್ ಇಟ್ಟಿದ್ದೀರಿ. ಆದರೆ ಯಾವುದೊಂದು ಪ್ರಾಜೆಕ್ಟ್ ಕೂಡ ಆಗಿಲ್ಲ. ಇದರ ಬಗ್ಗೆ ನಾನು ಹೇಳುವುದಾದರೆ 200 ಕೋಟಿ ರೂಪಾಯಿಯ ಪ್ರಾಜೆಕ್ಟೇ ಆಗಲಿ, 500 ಕೋಟಿ ರೂಪಾಯಿಯ ಪ್ರಾಜೆಕ್ಟೇ ಆಗಲಿ ನಿಮ್ಮ ಹತ್ತಿರ ಬಂಡವಾಳವೇ ಇಲ್ಲ. ಆದುದರಿಂದ ನೀವು ಎಷ್ಟನ್ನು ನಿರೀಕ್ಷಣೆ ಮಾಡಿಕೊಂಡಿರುತ್ತೀರೋ ಅಷ್ಟಕ್ಕೆ ಮಾತ್ರ ಯಾವ ಪ್ರಾಜೆಕ್ಟ್ ಆಗುವುದಕ್ಕೆ ಸಾಧ್ಯ ಇರುತ್ತದೋ ಅದನ್ನು ತೆಗೆದುಕೊಂಡು ಮುಗಿಸಬೇಕು, ಇಲ್ಲವಿದ್ದರೆ ಯಾವ ಪ್ರಾಜೆಕ್ಟ್ ಕೆಲಸವೂ ಕೂಡ ಮುಗಿಯುವುದಿಲ್ಲ. ಇದಕ್ಕೆ ಎರಡು ಕಾರಣಗಳನ್ನು ಕೊಡುತ್ತೇನೆ. ಮೊದಲನೆಯದಾಗಿ ಯಾವ ಕೆಲಸವನ್ನೇ ತೆಗೆದುಕೊಂಡರೂ ಟೈಂ ಷೆಡ್ಯೂಲ್ ಮಾಡಬೇಕು. ಏತಕ್ಕೆಂದರೆ ಇಷ್ಟೇ ದಿವಸದಲ್ಲಿ ಇಂಥ ಪ್ರಾಜೆಕ್ಟ್‌ಗಳ ಕೆಲಸವನ್ನು ತೆಗೆದುಕೊಂಡು, ಆ ಪ್ರಾಜೆಕ್ಟ್ ಕೆಲಸವನ್ನು ಮುಗಿಸಿ ಪೂರ್ತಿ ಪ್ರಯೋಜನವನ್ನು ರೈತರಿಗೆ ಕೊಡುವಂತಾಗಿರಬೇಕು. ಈ ರೀತಿಯಾದ ಒಂದು ಕ್ರಮ ನಿಮ್ಮಲ್ಲಿಲ್ಲ.

ಎರಡನೆಯದಾಗಿ ಇದಕ್ಕೆ ಬೇಕಾಗಿರುವ ಫೈನಾನ್ಷಿಯಲ್ ಷೆಡ್ಯೂಲ್ ಮೊದಲೇ ಇಲ್ಲ. ಅದೇನೆಂದರೆ, ಯಾವ ಪ್ರಾಜೆಕ್ಟ್ ಆಗಲಿ ಒಂದು ಕೋಟಿಯೋ, 10 ಕೋಟಿಯೋ ಎಂದು ಅಂದಾಜು ಹಾಕಿದರೆ ಅದನ್ನು ಅಷ್ಟಕ್ಕೇ ಮುಗಿಸಬೇಕು. ಈ ಒಂದು ಕ್ರಮವೂ ನಿಮ್ಮಲ್ಲಿಲ್ಲ. 75 ಕೋಟಿಯ ಒಂದು ಪ್ರಾಜೆಕ್ಟ್ ತೆಗೆದುಕೊಂಡರೆ ಆ ಪ್ರಾಜೆಕ್ಟ್ ಮುಗಿಯುವ ವೇಳೆಗೆ 300 ಕೋಟಿ ರೂಪಾಯಿ ಆಗಿಬಿಡುತ್ತದೆ. ಉದಾಹರಣೆಗೆ ಹೇಳುವುದಾದರೆ ಮಲಪ್ರಭಾ ಪ್ರಾಜೆಕ್ಟ್ ತೆಗೆದುಕೊಳ್ಳಿ. ಇನ್ನೊಂದು ಯಾವುದಾದರೂ ಪ್ರಾಜೆಕ್ಟ್ ತೆಗೆದುಕೊಳ್ಳಿ. 60 ಲಕ್ಷ ರೂಪಾಯಿಗಳ ಪ್ರಾಜೆಕ್ಟ್ 300 ಲಕ್ಷ ಆಗಿ ಬಿಡುತ್ತದೆ. ಹೀಗೆ ಯಾವ ಪ್ರಾಜೆಕ್ಟೇ ಆಗಲಿ ಅದು ಪೂರೈಸುವ ವೇಳೆಗೆ ಒಂದಕ್ಕೆ 4, 5, 6ರಷ್ಟು ಆಗಿಬಿಡುತ್ತದೆ. ಆದುದರಿಂದ ನಾನು ಹೇಳುವುದು ಈ ಕೆಲಸಗಳಿಗೆ ಒಂದು ನಿರ್ದಿಷ್ಟವಾದ ಮೊತ್ತವನ್ನು ಇಟ್ಟುಕೊಂಡರೆ ಅದು ಅಷ್ಟಕ್ಕೆ ಪೂರೈಸಬೇಕು ಎಂದು ಹೇಳುತ್ತೇನೆ. ಈಗ ನಿರ್ದಿಷ್ಟವಾದ ಮೊತ್ತಕ್ಕೆ ಪ್ರಾಜೆಕ್ಟನ್ನು ಪೂರೈಸುವ ಯೋಜನೆ ನಿಮ್ಮಲ್ಲಿಲ್ಲ. ಈ ರೀತಿ ದೇಶ ಪಾಪರ್ ಆಗುವ ನೀತಿ ಅನುಸರಿಸುತ್ತಿದ್ದೀರಿ ಎಂದು ಹೇಳಿದರೆ ತಪ್ಪಾಗುವುದಿಲ್ಲ. ತಾವು ಯೋಚನೆ ಮಾಡಿ. ಈವೊತ್ತಿನ ದಿವಸ ಯಾವ ಪ್ರಾಜೆಕ್ಟನ್ನೇ ತೆಗೆದುಕೊಳ್ಳಿ. ಶರಾವತಿ ಪ್ರಾಜೆಕ್ಟ್ ಆಗಲಿ, ಹೇಮಾವತಿ ಪ್ರಾಜೆಕ್ಟ್ ಆಗಲಿ, ಮಲಪ್ರಭಾ ಪ್ರಾಜೆಕ್ಟ್ ಆಗಲಿ, ಹಾರಂಗಿ ಪ್ರಾಜೆಕ್ಟ್ ಆಗಲಿ, ಕೃಷ್ಣಾ ಪ್ರಾಜೆಕ್ಟ್ ಆಗಲಿ ಯಾವುದೂ ಕೂಡ ಮೊದಲನೆ ಅಂದಾಜಿಗೆ ಒಂದೂ ಪೂರ್ಣವಾಗಿಲ್ಲ. ಮೊದಲಿಗಿಂತ ಒಂದಕ್ಕೆ 4, 5, 6ರಷ್ಟು ಹೆಚ್ಚಿನ ಅಂದಾಜಾಗಿದೆ ಎನ್ನುವುದನ್ನು ಹೇಳಬಹುದು.

ನೀವು ಎಷ್ಟೇ ಲೆಕ್ಕ ಹಾಕಿಕೊಂಡು ಮುಂಗಡವಾಗಿ ಕಾಂಟ್ರಿಬ್ಯೂಷನ್ ಜನರಿಂದ ತೆಗೆದುಕೊಂಡರೂ ಮೊದಲು ಅಂದಾಜು ಮಾಡಿದ್ದಕ್ಕಿಂತ ಐದಾರು ಪಟ್ಟು ಖರ್ಚು ಹೆಚ್ಚಾಗುತ್ತಿರುವುದನ್ನು ನೋಡಿದರೆ ಯಾವ ಪ್ರಾಜೆಕ್ಟ್‌ಗಳಾದರೂ ಇಷ್ಟೇ ಮೊತ್ತಕ್ಕೆ ಮುಗಿಯುತ್ತವೆ ಎನ್ನುವ ನಂಬಿಕೆ ಯಾರಿಗಿದೆ! ಮಾನ್ಯ ಮುಖ್ಯ ಮಂತ್ರಿಗಳಾಗಲೀ, ನೀರಾವರಿ ಮಂತ್ರಿಗಳಾಗಲೀ, ಯಾವ ಪ್ರಾಜೆಕ್ಟೇ ಆಗಲಿ, ಅದನ್ನು ನಿಯಮಿತ ಕಾಲದಲ್ಲಿ, ನಿಯಮಿತ ಮೊತ್ತದಿಂದ, ನಿಯಮಿತವಾದ ಯೋಜನೆಯಿಂದ ಪೂರೈಸಿ ಅದರಿಂದ ಪ್ರಯೋಜನವನ್ನು ಪಡೆಯುತ್ತೇವೆ, ಆ ಯೋಜನೆಯನ್ನು ಮುಗಿಸುತ್ತೇವೆ ಎಂದು ಹೇಳಿ ಅದರಂತೆ ಮಾಡುತ್ತಾರೆಯೇ? ಅದೇ ನಾವು ಆಂಧ್ರ ಪ್ರದೇಶವನ್ನು ತೆಗೆದುಕೊಂಡರೆ ನಾಗಾರ್ಜುನಸಾಗರವನ್ನು ಇಷ್ಟೇ ಕಾಲದಲ್ಲಿ ಮುಗಿಸುತ್ತೇವೆ, ಅದರ ಪ್ರಯೋಜನವನ್ನು ಇಷ್ಟರ ಮಟ್ಟಿಗೆ ಕೊಡುತ್ತೇವೆ ಎಂದು ಹೇಳಿದಂತೆ ಮಾಡಿ ಜನರಲ್ಲಿ ವಿಶ್ವಾಸವನ್ನು ಹುಟ್ಟಿಸಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಜನಗಳಿಗೆ ಇಂಥ ವಿಶ್ವಾಸ ಬರುವವರೆಗೂ ಒಂದು ಎಕರೆಗೆ 500 ರೂಪಾಯಿ ಪ್ರಕಾರ ಮುಂಗಡವಾಗಿ ಕಾಂಟ್ರಿಬ್ಯೂಷನ್ ಹಣವನ್ನು ಕೊಡಲು ಅವರಿಗೆ ಧೈರ್ಯವಿಲ್ಲ. ಶರಾವತಿ ಯೋಜನೆಯಲ್ಲಿ ಆರೂವರೆ ಕೋಟಿ ರೂಪಾಯಿ ಖರ್ಚು ಮಾಡಿ ತಲಕಳಲೆ ಡ್ಯಾಂ ಕಟ್ಟಿಸಿದಿರಿ. ಅದರಲ್ಲಿ ವಿಪರೀತ ನೀರು ಬರುತ್ತದೆ ಎಂದು 13 ಲಕ್ಷ ರೂಪಾಯಿ ಖರ್ಚು ಮಾಡಿ ಹೊಸ ಪೈಪ್ ಮುಖಾಂತರ ಸಿಮೆಂಟನ್ನು ಒಳಗೆ ತೂರಿಸಿದಿರಿ. ರಾಜ್ಯದಲ್ಲಿ ಕಟ್ಟಲಾಗಿರುವ 16 ಸೇತುವೆಗಳಲ್ಲಿ 10 ಸೇತುವೆಗಳು ಹಾನಿಗೊಳಗಾಗಿವೆ ಎಂದು ಅದಕ್ಕೆ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಮಾಡಿರುವ ಕೆಲಸವನ್ನು ನೋಡಿದರೆ ಈ ರೀತಿ, ಆಗಿರುವ ವೆಚ್ಚವನ್ನು ನೋಡಿದರೆ ಆರೇಳರಷ್ಟು. ಹೀಗಿರುವಾಗ ಯಾವ ರೈತನಾದರೂ ಕಾಂಟ್ರಿಬ್ಯೂಷನ್ ಕೊಡಲು ಮುಂದೆ ಬರುತ್ತಾನೆಯೇ! ರೈತನಿಗೆ ಬ್ಯಾಂಕುಗಳಿಂದ ಸಾಲ ಕೊಡಿಸುವ ವಿಚಾರವನ್ನು ಮಾನ್ಯ ಮಂತ್ರಿಗಳು ಹೇಳಿದರು. ಆ ರೀತಿಯಾಗಿ ಮಾಡಿದ್ದಾದರೆ ಬ್ಯಾಂಕಿನವರು ಅವರಿಗೆ ಬರಬೇಕಾಗಿರುವ ಹಣಕ್ಕಾಗಿ ರೈತನ ಆಸ್ತಿಯನ್ನು ಹರಾಜು ಹಾಕಿ ಅವನನ್ನು ಹಾಳು ಮಾಡತಕ್ಕ ಪರಿಸ್ಥಿತಿ ಬರುತ್ತದೆ. ರೈತ ಈಗ ಯಾವ ಸ್ಥಿತಿಗೆ ಬಂದಿದ್ದಾನೆ ಅದಕ್ಕಿಂತ ಕೀಳು ಸ್ಥಿತಿಗೆ ಬರುತ್ತಾನೆ. ಸಾಲದ ಹೊರೆಯಿಂದ ಸತ್ತು ಸುಣ್ಣವಾಗಿರುವವನ ಮೇಲೆ ಹೆಚ್ಚು ಸಾಲವನ್ನು ಹೊರಿಸಿದರೆ ದೇಶದ್ರೋಹ ಮಾಡಿದ ಹಾಗಾಗುತ್ತದೆ. ಆದ್ದರಿಂದ ಈ ವಿಧೇಯಕವನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

† SRI V. N. PATIL (Humnabad).—It is very unfortunate that during this year of Gandhi Centenary, the Government is bent upon breaking the back bone of the down trodden class *i.e.*, the agriculturists. The Government is saying that they are for the agriculturists. This is the slogan they are crying. They have no regard or sympathy towards these poor people. If they love and it is only lip sympathy. Fortunately the Food Minister is here. He is not greatful to the agriculturists who are providing food to the people of the State. Can we be ungreatful to these people who are supplying food to the entire Nation? Instead of being good to them, they are creating all sorts of hardships to them. The are they back bone of the Nation. What is the return we are paying to these people? Do you think this measure is going to be a boon? It is nothing but crushing these down trodden people. Is it brought on them just because they are not having an organisation take the Chamber of commerce? Is this measure brought on them just because they are supporting the country in every respect? It is very unfortunate that this Government is bent upon imposing hardships on these people. The Government is behaving in an irresponsible manner. They say that they are for establishing Socialistic Pattern of Society. Is it to achieve that pattern of society, they are bringing in this legislation? Why not the Government itself spend on the construction of irrigation projects? Does the Government think this measure, if brought, would help the ryots? If such measures are brought into force, the richer classes wil be benefited. That is the position prevailing in the state.

(SRI V. N. PATIL)

What is happening in Tungabhadra and Cauvery basins? All the lands are not being irrigated and it is only the lands of those who are able to spend, that are being irrigated. Unless the poor ryot is in a position to spend money for levelling his land and all that, there is no possibility of water coming to his land. 90 per cent of population of this State is in the same position. But our Government is pretending as if they are the guardian of the ryots. They are levying betterment fee if more than 100 acres are to be irrigated and contribution will be recovered in advance. Still you want to call it a progressive legislation. It is nothing but oppressive law. By this measure you are trying to crush the ryots. I call this a black Bill. If this Bill is passed it will amount to auctioning the land of a ryot if he does not pay the contribution and betterment fee. After the Bank nationalisation, we thought that wisdom has dawned on some section of the ruling party. In the party meeting of the ruling party I am told that some members have protested for bringing in this measure. It seems they have said that they will have no face to see the agriculturists in their constituency. Ordinarily the ryots will have already mortgaged their lands to meet expenditures connected with the marriages of their sons or daughters. Such being the case if they are compelled to pay the contribution and betterment levy, they have to sell their lands. That would be the position of the agriculturists if you bring this legislation into force.

In a Welfare State you are inviting industrialists from outside to establish industries here. Why don't you extract money from them? You are not taking anything from firms like Tatas and Birlas. You want to give all facilities to them. You want to open more and more wine shops and distilleries and give encouragement to the richer class. At the same time you want to punish these poor people by way of this measure. You want them to pay in advance the contribution by mortgaging their lands to bank. If they are insisted to pay, I am sure they have to sell the lands and be deprived of their land which is the only source of their livelihood. Your measure will lead them to this extent. Your intention is to snatch away their lands. In the Welfare State of yours what have you done for these poor people? You are levying all kinds of taxes. You want to grow more food without allowing water to flow on the fields of the ryots. Have you got a real intention of allowing water on the fields without getting any return from them? In a Welfare State you should have not done like that. Instead of helping them you are allowing them to get into the clutches of the richer people or banks to get the money to pay you and finally deprive them of their land.

4-30 P.M.

So the first duty of the Government will be to create more and more dams and not to demand evey single pie from the agriculturists. What

they are paying now in the shape of surcharge, health cess and education cess is more than what they can spare. After all they are not given any educational facilities; they have no health facilities, but the cess is being collected by the Government. Even then the appetite of the Government, this devilish Government, is not satisfied; they are further demanding more and more from the raiyats. So, I think it is necessary to withdraw this Bill. I say to the Government, do not think of bringing such a Bill. Of course there may be a few people who may be generous and rich and they may say that if the Government builds dams in their area, they have no objection to pay some portion of the cost as advance contribution. Let such philanthropic people by all means invest money. I do not object. If the Government is courageous enough to demand money from the vested interest, let them do it first. But let me tell the Government that none of those who work hard on the fields for creating more food, will be happy with a Bill of this nature. We have it as our slogan GROW MORE FOOD to bring relief to the common man. Instead of bringing relief, we are taking back to the villages such a bad and sad news. Such a Bill is not worth welcoming at all.

Lastly, I want to say one word. I agree with the Government that it requires crores and crores of rupees. I agree that funds are necessary to undertake development works in the State. But so many of my friends have drawn attention of this House that if wastage is stopped, plenty is with us. Some experts in food matters have said that in India food shortage is only to the extent of 17 per cent, but wastage in transportation and rat-menace (including two-legged rats) is 37 per cent. They say that if we stop this wastage, food will be selfsufficient. Why not start this campaign? If we are able to successfully stop wastage, what we are able to produce by the existing irrigation systems, will be quite sufficient. We need not go and beg before anybody. Of course, scarcity of money is being created artificially. It is only to woo a particular area, with political motives and when this discrimination is there, it will certainly take a long time for us to unite harmoniously. Justice and morality requires that this Bill should be scrapped.

SRI N. B. SIRDESAI (Khanapur).—Mr. Deputy Speaker Sir, I rise to oppose strongly the Mysore Irrigation Levy and Betterment Contribution and Water-Rate (Amendment) Bill, 1969 because it is unjust and improper and if it is brought into force, it would cause great harassment to the land-holders and tenants. It is the bounden duty of the Government to undrtake projects and see to the feasibility or otherwise of an irrigation project and provide irrigation facilities to the landlords and tenants. But here, by introducing this Bill, I am not able to discover much sense in the provisions which ask for advance contributions. Government have now come forward to say that unless advance contribution is paid by raiyats who will be beneficiaries under the project, Government will not commence and it is not bound to commence projects. I fail to nderstand what prudence or sense Government have used in bringing

(SRI N. B. SIRDESAI)

this provision Sir, because if the Government wants to make the Grow More Food Campaign successful, they must extend irrigation facilities, to the landlords. Then only the Grow More Food Campaign will be successful. Strictly speaking, Government should not add this condition that 66 per cent of the people of that area should come forward with a request that a project work should be undertaken by Government and that they are prepared to pay advance contribution, and then only work will commence. Otherwise, Government is not bound to take up that project. Why should the Government expect people to come forward ? The feasibility or otherwise of the project should be found out by the Government and it is the bounden duty of the Government to provide irrigation facilities. It is really very strange that the Government have made provision for granting a rebate of 10 per cent to the persons who advance contributions in one lump. Landlords and tenants in the State are very poor and they cannot afford to carry on agricultural operations because these are very hard days. They cannot afford the necessary wherewithal even to purchase the fertilizers. In such circumstances, if they are forced to pay advance contribution, it would be very hard for the cultivators and landlords.

So I think water rate is related to the betterment contribution and advance contribution. And therefore, if I say a few words regarding the water rate, it may not be out of place. It is provided in the relevant Acts that any increase in the levy has to be intimated to the landlords or parties concerned and if the parties have any grievance, they have the right of appeal to the Assistant Commissioner under the rules, and the appellate authorities are not going to decide cases quickly. The Assistant Commissioner says that it is within his discretion to decide the appeals. Meanwhile, the Thasildar is saying that he is bound to collect the water rate. The raiyats are therefore placed in a sad plight. The samething will happen to them if this Bill is passed authorising the Government to collect advance contribution. Notices will be issued by the Deputy Commissioner and officers concerned and they will demand the incorrect assessment of advance contribution.

That is why I strongly oppose this Bill. I thank the Chair for giving methis much of time for making my observations on this Bill.

† SRI P. B. NANDIHALI (Uchagaon).—Mr. Deputy Speaker Sir, I rise to oppose strongly the Mysore Irrigation Levy and Betterment Contribution and Water Rate (Amendment) Bill, 1959.

I shall refer to Clause 3A relating to Levy of Advance Betterment Contribution. I am very sorry to say that the Government has imposed advance contribution on lands to complete irrigation schemes. They have stated that it would not be possible for them to take up irrigation projects capable of irrigating more than 100 acres of land with recovery of advanc contribution. They want this contribution to commece and

complete the construction, restoration, expansion or alteration of any work which is capable of irrigating more than 100 acres of land. The minor irrigation schemes cannot be taken up because of this Clause in spite of having so many resources. Therefore, I suggest to the Government to make a change in the clause, substituting 500 acres of land in place of 100 acres of land.

In sub- clause (2) of the same clause, it is stated :

> "when the landholders of not less than sixty-six per cent of such lands express their willingness in writing—to make such advance contribution towards such work either in one lumpsum or in four equal annual instalments ...... the Government will commence the work."

I earnestly request the Government to change "66 per cent" to "thirty per cent" of land holders.

In sub-clause (2) it is also stated that

> "The draft scheme referred to in sub-section (1) shall specify the lands ...... which in the opinion of the Government are capable of being benefited by the completion of such work..........."

In this connection, let me tell my bitter experience. I have taken so many Executive Engineers, Assistant Engineers and officers to the villages to select minor and major schemes. But unfortunately they won't select the schemes where they are absolutely necessary. When the agriculturists come forward to co-operate with them and when the Gram Panchayats and Taluk Boards pass resolutions that a particular scheme or work is necessary immediately at a particular place, Government must undertake that scheme or work and should not depend only on the recommendations of their Officers.

Forest areas must be exempted from levy of these contributions. Otherwise, it is not possible for the common peasants to come forward and accept the schemes. Since this contribution is such a great burden on the small villagers and poor farmers, that it is not possible at all to expect them to accept the schemes.

My another suggestion is this : The farmers who have only 2 acres of bagayat land must be exempted from this contribution and tax. The farmers who have 4 acres of paddy lands and 8 acres of non-paddy lands and non-bagayath land should also be exempted from this levy because in this country the people by and large, are very poor. Unless and until we have a progressive policy in this democracy to help the poor toiling masses and improve their lot, it is not at all possible to solve their difficulties and problems. By reactionary policies their poverty will increase and the rich people become richer. Government is already collecting land Revenue, water rate, etc., from poor agriculturists, and in addition Government is expecting from them this betterment contribution. This measure will not make our State progressive.

(SRI P. B. NANDIHALI)

In this context, I must give expression to my feelings regarding the attitude of the Government in respect of border areas. We are repeatedly requesting the Government to take developmental works in our area. When they are collecting so many huge taxes from the Marathi people, it is their bounden duty to take development schemes in our areas also. Instead of that, they are arresting the Marathis. They have retained those areas in Mysore against the wishes of the people. Government is purposely neglecting Marathi areas and not taking any projects there. I have suggested so many schemes to the Government. It will not be out of place of I bring to the notice of the House, Bellaranala scheme in Belgaum Taluk, Government every now and then raises the slogan of Grow More Food Campaign but fail to help the peasants in stepping up production of food. Bellaranala scheme is pending with Government for the last several years. Every year the farmers are put to heavy loss on account of floods from Bellaranala. We are pressing for the implementation of that scheme repeatedly. But everything remains as a promise. Up till now the Government have not taken any action to fulfil their promise to implement Bellaranala scheme. For not taking up this scheme, every people are put to lakhs of rupees loss. Thousands of quintals of paddy are lost. Due to the negligence and indifference of the Mysore Government and its officers, we are suffering this great loss. If the attitude of the Government is partial and if they give discriminatory treatment and relegate us to secondary citizenship, I am very sorry to say that the Government is acting against the very spirit of democracy and justice. They are purposely neglecting the development of our area. Under these circumstances, the Government has no right to take any action to tax the people of the Marathi area.

As there is no time to speak further, I conclude by thanking the Chair.

† SRI R. G. WALI (Hubli).—I welcome this Bill at the very outset because it has got some new features which have been very well thought of by the Government. Firstly, this is the one Bill wherein there is a proposal for the first time for participation by the ryots in the financial stake of the Government. Many times the industrialists and businessmen are criticised that they look to their own interest. I want to point out here that if there is contribution there is participation of these people in the industry or business. So also the proposal that is brought before the House is on commercial lines. The people who want to improve their lot, their lands, to produce more and participate in the progress of the country, can participate in this scheme. This is a progressive proposal.

Many apprehensions have been expressed by a number of friends in this House. Because there is the participation of 65 per cent by the ryots, it is misunderstood that this money is collected and utilised for

some other purpose by the Government. The betterment levy proposed is practically a majority decision. If 66 per cent of the people decide that they should have an irrigation project or decided that their future should be improved, they can come and say that they will contribute and pay the betterment levy and the project should be taken up. Even in respect of payment, the Government have stated that they need not pay in lumpsum but can pay in instalments. The idea is that they should participate and improve their lot.

Another important aspect which I want to point out is, many friends on the other side have tried to show that they have the interests of the ryots. I want to say that we the people on this side are more interested improving the lot of the agriculturists.

SRI K. H. PATIL.—May I know whether the Hon. Member will agree if the same betterment levy is imposed on the people in the urban area ?

SRI R. G. WALI.—I can say that the urban people are always prepared to take liabilities and they are taking and they are heavily taxed. When we want to develop our country, it is necessary that we should be prepared to contribute. Here is a progressive idea where the people can improve their lot. Supposing an irrigation project in a particular area is taken up today, immediately when the proposal comes and works start, the cost of the land will go up. I can give an example of Davangere where the Bhadra Project was taken up. I had seen only a few years back barren lands but now we see green lands and the people are so happy. Can we not expect our people to prosper like that ? The value of the land which was once Rs. 500 has gone upto Rs. 5,000. That shows that the people will prosper. So, many of the apprehensions that our people have, must be removed. The suggestion here is, if the government wants to take up a scheme, and that scheme is supported by 66 per cent of the people it should be taken up and executed. That shows this is a scheme which can work on democratic principles. This is the first time that a scheme on democratic principles is placed before the agriculturists. I feel such a proposal should be wholeheartedly welcomed.

One other aspect is, we want to develop our country and improve the lot of the ryots. All projects cannot be taken up at a time. All projects have to be financed ; it is not that the Government has no money. But the thing is, such projects which are meant for the improvement of the lot of the people, have to be financed and completed as quickly as possible. To get finance, is it not the duty of each individual who is concerned with the improvement of his lot, to contribute ?

Many of my friends have understood that this idea is meant only for bigger projects. It is not so. Even if a group of people come forward and say that their village should be improved and so some irrigation projects must be taken up and for that they are prepared to give their contribution, the Government, can do it. This is a progressive idea and we must see that this scheme is successful. More stress

(SRI R. G. WALI)

was laid on the amount taken as loan by mortgaging their lands to the bank and that for giving money to the Government the land is mortgaged to somebody. It is not so. Whatever interest that will have to be paid, will be paid by the ryots to the banks because they are getting the money as loan. If I have understood the latest statements of our Prime Minister correctly, she has stated that she wants to help the ryots by giving money from the banks, so that the agriculturists can improve their lands. Here is a proposal and we can get moneys from the banks.

Sri K. H. PATIL.—Does the Hon. Member think that the loan got from the banks is free from any encumbrance on the land?

Sri R. G. WALI.—The procedure and other things are matters to be considered later. This is a policy decision taken by the House. This is one of the progressive Bills and I request the House to support it whole-heartedly.

5-00 P. M.

ಶ್ರೀ ಎ. ಆರ್. ಪಂಚಗಾವಿ.—ಈಗ ಮನೆಯ ಮುಂದೆ ಇರುವ ಬಿಲ್ಲು ಒಂದು ತರಹದ ವಿಚಿತ್ರ ಸನ್ನಿವೇಶದಲ್ಲಿ ಬಂದಿದೆ. ಒಂದು ಕಡೆ ನಮಗೆ ಈ ಹೊತ್ತು ಇರುವ ಪ್ರಶ್ನೆ ನೋಡಿದರೆ ಸುಮಾರು 26 ನೀರಾವರಿ ಯೋಜನೆಗಳನ್ನು ಸದ್ಯದಲ್ಲೇ ತೆಗೆದುಕೊಳ್ಳಬೇಕು, ತೆಗೆದುಕೊಳ್ಳದಿದ್ದರೆ ನಮಗೆ ಮುಂದೆ ಸರಿಯಾದ ಅನುಕೂಲಗಳು ಸಿಗುವುದಿಲ್ಲ. ಇದು ಅಲ್ಲದೆ ನಮ್ಮಲ್ಲಿ ಈಗ ಕೃಷ್ಣ ಗೋದಾವರಿ ನದಿ ನೀರಿನ ವಿವಾದ ನಡೆಯುತ್ತಿದೆ. ಇದು ಯಾವ ಪರಿಸ್ಥಿತಿ ಮುಟ್ಟುತ್ತದೋ ನೋಡಬೇಕು. ತೀವ್ರವಾಗಿ ಇದರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ನಮಗೆ ಇದರಿಂದ ಬರುವ ಲಾಭ ಕೈಬಿಟ್ಟು ಹೋಗುತ್ತದೆ ಮತ್ತು ಇದರಿಂದ ರೈತರು ಕೂಡ ಕಳವಳಕ್ಕೆ ಈಡಾಗಿದ್ದಾರೆ. ಇನ್ನು ರೈತರಿಗೆ ಸಹಾಯ ಮಾಡುತ್ತೇವೆಂದು ಸರ್ಕಾರದವರು ಬೇಕಾದಹಾಗೆ ಸೊಸೈಟಿಗಳಿಗೆ ಹಾಗೂ ಬ್ಯಾಂಕುಗಳಿಗೆ ಹಣವನ್ನು ಕೊಡುತ್ತಿದ್ದಾರೆ. ಆದರೆ ಹೀಗೆ ಕೊಟ್ಟಿರುವ ಸಾಲಗಳಿಂದ ಸುಮಾರು ನೂರರಷ್ಟು ರೈತರಲ್ಲಿ ಕೂಡ ಕೊಟ್ಟ ಸಾಲಗಳು ವಸೂಲಾಗಿಲ್ಲ. ನಮ್ಮ ಕೋ-ಆಪರೇಷನ್ ಮಿನಿಸ್ಟರವರೂ ಕೂಡ ರೈತರಿಗೆ ಎಷ್ಟು ಮಟ್ಟಿಗೆ ಸಾಲ ಕೊಡಬಹುದೋ ಅಷ್ಟು ಶಕ್ತಿಯನ್ನುಪಯೋಗಿಸಿ ಸಹಾಯ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಎಷ್ಟುಮಟ್ಟಿಗೆ ಇಂತಹ ರೈತರ ಮೇಲೆ ಕರಭಾರ ಹೊರಿಸಬಹುದು ಎನ್ನುವುದನ್ನು ಸರಿಯಾಗಿ ವಿಚಾರ ಮಾಡಿ ಹಾಕಬೇಕು. ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಕೊಡಬೇಕು ಎಂದರೆ ಯಾವ ರೀತಿ ಕೊಡಬೇಕು ಎನ್ನುವುದನ್ನು ಸರಿಯಾಗಿ ವರ್ಕ್‌ಔಟ್ ಮಾಡಿ ಅದನ್ನು ಯಾವ ಆಧಾರದಮೇಲೆ ಹಾಕಬಹುದು ಎನ್ನುವುದನ್ನು ರೈತರಿಗೆ ತಿಳಿಸಿ ಅವರಿಂದ ಸುಮಾರು ಇಪ್ಪತ್ತು ಕಂತುಗಳಲ್ಲಿ ಕೊಡಬೇಕೆಂದು ಹೇಳಿದರೆ ಅವರೂ ಕೊಡುತ್ತಾ ಹೋಗಬಹುದು. ಈಗ ದೇಶದಲ್ಲಿ ಅನೇಕ ತರಹದ ನೀರಾವರಿ ಯೋಜನೆಗಳು ಎಂದರೆ ಘಟಪ್ರಭಾ ಹಾಗೂ ಮಲಪ್ರಭಾ ಯೋಜನೆಗಳು ಆಗಬೇಕಾಗಿವೆ, ಇವಕ್ಕೆಲ್ಲ ಹಣ ಒದಗಿಸಬೇಕಾಗಿದೆ, ಇದರ ಬಗ್ಗೆ ಎಷ್ಟು ದುಡ್ಡು ಖರ್ಚಾಗುತ್ತದೆ ಅದನ್ನೂ ನೋಡಬೇಕು. ಮತ್ತು ನಾವು ಮಾಡುವ ಯೋಜನೆಗಳಿಂದ ಮ್ಯಾಕ್ಸಿಮಮ್ ಬೆನಿಫಿಟ್ ಪಡೆಯುವಂತೆ ಯೋಜನೆಗಳನ್ನು ಹಾಕಿಕೊಳ್ಳಬೇಕು. ಕೆಲವು ಕಡೆ ಸರಕಾರ ಹಾಕಿದ ದುಡ್ಡು ಹಾಳಾಗಿ ರೈತರಮೇಲೆ ಹೆಚ್ಚು ಹೊರೆ ಬೀಳುತ್ತಿದೆ. ಇಲ್ಲಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಎಂದು ಏನು ಹಾಕಬೇಕೆಂದು ಇದ್ದಾರೆ ಇದನ್ನು ನಾಲ್ಕು ಕಂತುಗಳಲ್ಲಿ ಮುಗಿಸಬೇಕು ಎಂದರೂ ರೈತರು ಅದನ್ನು ಕೊಡುವ ಸ್ಥಿತಿಯಲ್ಲಿಲ್ಲ. ಈಗ ದೇಶದಲ್ಲಿ ದುಡ್ಡಿಗೆ ಒಂದು ರೀತಿಯಾದ ಬಿಕ್ಕಟ್ಟಿನ ಪರಿಸ್ಥಿತಿ ಇದೆ. ಇದಕ್ಕಾಗಿ ನಮ್ಮ ಭಾಗದಲ್ಲಿರುವ ಘಟಪ್ರಭಾ ಯೋಜನೆಯನ್ನು ನಾವು ಪೂರ್ಣವಾಗಿ ಬೇಗನೆ ಮಾಡಬೇಕು ಎಂದು ಇಲ್ಲಿ ಒತ್ತಾಯ ಮಾಡುತ್ತೇನೆ. ನಾಲ್ಕಾರು ವರ್ಷಗಳಿಂದ ರೈತರ ಸ್ಥಿತಿ ಸುಧಾರಿಸುತ್ತದೆ ಎಂದು ಇತ್ತು ಆದರೆ ಹಾಗಾಗದೆ ಇಂದು ರೈತರು ಬಹಳ ಕಷ್ಟದ ಸ್ಥಿತಿಯಲ್ಲಿದ್ದಾರೆ. ಈಗ್ಗೆ ಸುಮಾರು ಆರು ತಿಂಗಳ ಹಿಂದೆ ಬೆಲ್ಲದ ಧಾರಣೆ ಸುಮಾರು 100 ರಿಂದ 170ರ ವರೆಗೆ ಇತ್ತು. ಈ ಬೆಲ್ಲವನ್ನು

ದೇಶದಿಂದ ಹೊರಗೆ ಕಳುಹಿಸಲು ಪರ್ಮಿಷನ್ ಕೊಟ್ಟಿದ್ದರೆ ಅವರಿಗೆ ಸಾಕಷ್ಟು ದುಡ್ಡು ಸಿಗುವುದಕ್ಕೆ ಅವಕಾಶವಾಗುತ್ತಿತ್ತು. ಆದರೆ ಸರಕಾರ ಹೊರಗೆ ಹೋಗಲು ಪರ್ಮಿಷನ್ ಕೊಡಲಿಲ್ಲ ಇದರಿಂದ ರೈತರಿಗೆ ನಷ್ಟವಾಯಿತು. ಅದರಿಂದಾಗಿ ಕಬ್ಬು ಬೆಳೆ ಕಡಿಮೆಯಾಗುತ್ತದೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ತೊಂದರೆಯಾಗುತ್ತದೆ. ಇದರಲ್ಲಿ ಹೇಳಿರುವಂತೆ ರೈತರಲ್ಲಿ ನೂರಕ್ಕೆ 66 ಭಾಗ ಮುಂದೆ ಬಂದು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಸರಕಾರಕ್ಕೆ ತಿಳಿಸಿದರೆ ಆಗ ಅದನ್ನು ವಿಚಾರ ಮಾಡಬಹುದು. ಒಟ್ಟಿನಲ್ಲಿ ಈ ಬಿಲ್ಲಿನಲ್ಲಿರುವ ತತ್ವವನ್ನು ನಾವು ಒಪ್ಪಬಹುದು. ಎಷ್ಟು ಮಟ್ಟಿಗೆ ರೈತರು ಭಾರ ಹೊರಬಹುದು ಎನ್ನುವುದನ್ನು ವಿಚಾರ ಮಾಡಿಕೊಂಡು ಇಂತಹ ಯೋಜನೆಗಳನ್ನು ತರಬಹುದು ಮತ್ತು ಅಡ್ವಾನ್ಸಾಗಿ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಕೊಡುವಾಗ ಇಪ್ಪತ್ತು ಕಂತುಗಳಲ್ಲಿ ಕೊಡುವ ಅವಕಾಶ ಮಾಡಿಕೊಡಬೇಕು. ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟುದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ (ನ್ಯಾಯ, ಕಾರ್ಮಿಕ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಯವರು).—ಸ್ವಾಮೀ, ಈ ಮಸೂದೆಯ ಮೇಲೆ ತುಂಬ ಉಪಯುಕ್ತವಾದ ಚರ್ಚೆಯಾಗಿದೆ. ಈ ಚರ್ಚೆಯನ್ನು ನಾನು ಕೇಳಿದ ಮೇಲೆ ಈ ಸಭೆಯಲ್ಲಿರುವ ಎಲ್ಲ ಸದಸ್ಯರೂ ರೈತರ ಹಿತಾಸಕ್ತಿಯ ಬಗ್ಗೆ ಎಷ್ಟು ಉತ್ಸುಕತೆಯಿಂದ ಇದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ಆದರೆ ಎಲ್ಲರ ಗುರಿಯೂ ಒಂದೇ ಆಗಿದೆ. ಪ್ರತಿಯೊಬ್ಬರೂ ಇದರ ಬಗ್ಗೆ ಮಾತನಾಡಿದರು ಮತ್ತು ಈ ಮಸೂದೆಯನ್ನು ಯಾವ ರೀತಿಯಲ್ಲಿ ಉತ್ತಮಪಡಿಸಬೇಕು ಮತ್ತು ಎಷ್ಟು ಜಾಗ್ರತೆ ರೈತರಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎನ್ನುವ ಕಾತುರತೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇದು ತೀರಾ ಒಂದು ಹೊಸ ಮಾರ್ಗ. ಈ ಹೊಸಮಾರ್ಗ ಬಂದಮೇಲೆ ಇದರ ಪ್ರತಿಕ್ರಿಯೆ ಕೂಡ ಹೆಚ್ಚಿನ ರೂಪದಲ್ಲಿರುತ್ತದೆ. ಆ ಕಾರಣದಿಂದಾ ಈ ಸಭಾ ಸದಸ್ಯರು ಈ ಮಸೂದೆಯ ಮೇಲೆ ನಾನಾ ಮುಖವಾದ ಚರ್ಚೆಯನ್ನು ಮಾಡಿ ಹೆಚ್ಚಿನ ಬೆಳಕನ್ನು ಚೆಲ್ಲಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಪಾಟೀಲರವರು ಒಂದು ಮಾತು ಹೇಳಿದರು. ಸಾರ್ವಜನಿಕರ ಅಭಿಪ್ರಾಯ ಪಡೆಯಲು ಈ ಮಸೂದೆಯನ್ನು ಕಳುಹಿಸಿ ಎಂದು. ಈ ಮಾತನ್ನು ಮೇಲಿಂದ ಮೇಲೆ ನಿಮ್ಮವರೇ ಹೇಳುತ್ತಲಿದ್ದಾರೆ ಎಂದೂ ಹೇಳಿದರು. ಇದರಲ್ಲಿ ನಮ್ಮವರೇ ಹೇಳಲಿ ಎದುರು ಪಕ್ಷದವರೇ ಹೇಳಲಿ ಜನರಿಗೆ ಒಳ್ಳೆಯದಾಗುತ್ತದೆ ಎಂದು ಯಾರು ಹೇಳಿದರೂ ಅದನ್ನು ಕೇಳಲೇಬೇಕು. ಯಾವುದಾದರೂ ವಿಚಾರ ಪ್ರಜಾಸತ್ತೆಗೆ ವಿರೋಧವಾದ ವಿಚಾರವಾಗಿದ್ದರೆ ಅದು ಯಾವ ಭಾಗದಿಂದ ಬಂದರೂ ಅದನ್ನು ಹೇಳುವುದಕ್ಕೂ ಆಗುವುದಿಲ್ಲ, ಕೇಳುವುದಕ್ಕೂ ಆಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಈ ಸಭೆಯ ಸದಸ್ಯರು ಪ್ರಜಾಪ್ರತಿನಿಧಿಗಳು ಆದುದರಿಂದ ಪ್ರಜೆಗಳ ಅಭಿಪ್ರಾಯಗಳನ್ನು ಪ್ರತಿಪಾದಿಸಲು ಅವರಿಗೆ ಸಂಪೂರ್ಣ ಶಕ್ತಿ ಇದೆ. ಶಕ್ತಿ ಇಲ್ಲವೆಂದು ಯಾರೂ ಅನುಮಾನಪಡಬೇಕಾಗಿಲ್ಲ. ಶ್ರೀಮಾನ್ ಚನ್ನಬಸಪ್ಪನವರು ಪ್ರಜೆಗಳ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ ಮತ್ತು ಅವರ ಅಭಿಪ್ರಾಯಗಳನ್ನು ಕೇಳಿಯೂ ಇದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಇದನ್ನು ಸಾರ್ವಜನಿಕಾಭಿಪ್ರಾಯಕ್ಕೆ ಏತಕ್ಕೆ ಕಳುಹಿಸಬಾರದು !

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರ ತಿಳುವಳಿಕೆಗಾಗಿ ಏನು ಹೇಳಬೇಕೋ ಅದನ್ನು ಇಲ್ಲಿ ಹೇಳುತ್ತಿದ್ದೇನೆ. ಇಲ್ಲಿ ಯಾವ ಸದಸ್ಯರು ಮಾತನಾಡಿದರೂ ಅವರು ನಮ್ಮ ರಾಜ್ಯದ ಜನರ ಅಭಿಪ್ರಾಯವನ್ನು ಇಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಈ ಸಭೆಯಲ್ಲಿ ಚರ್ಚೆಯಾದ ಮೇಲೆ ಅಖೈರಾಗಿ ತೀರ್ಮಾನವಾಗುವಾಗ ಪ್ರಜಾಭಿಪ್ರಾಯದ ತೀರ್ಮಾನವನ್ನು ಅವಲಂಭಿಸಿರುತ್ತದೆ ಎಂದು ನನ್ನ ಭಾವನೆ. ಆದುದರಿಂದ ನನ್ನ ಖಚಿತವಾದ ಅಭಿಪ್ರಾಯ ಈ ಬಿಲ್ಲನ್ನು ಸಾರ್ವಜನಿಕರ ಅಭಿಪ್ರಾಯ ಪಡೆಯಲು ಕಳುಹಿಸುವ ಅಗತ್ಯವಿಲ್ಲ ಎಂದು ನನ್ನ ನಮ್ರ ವಿನಂತಿ. ಶ್ರೀಮಾನ್ ಸಿದ್ಧವೀರಪ್ಪನವರು ಈ ಚರ್ಚೆಯಲ್ಲಿ ಭಾಗವಹಿಸಿದಾಗ ನಾನು ಇಲ್ಲಿರುವುದಕ್ಕೆ ಅಸಾಧ್ಯವಾದುದಕ್ಕೆ ವಿಷಾದಿಸುತ್ತೇನೆ. ಕಾರಣ, ಮೇಲ್ಮನೆಯಲ್ಲಿ ಕೂಡ ಅಧಿವೇಶನ ನಡೆಯುತ್ತಿದೆ. ನನಗೆ ಸಂಬಂಧಪಟ್ಟ ಕೆಲವು ವಿಚಾರಗಳು ಅಲ್ಲಿ ಇದ್ದುದರಿಂದ ನಾನು ಅಲ್ಲಿ ಹೋಗಬೇಕಾಯಿತು. ಅವರು ಹೇಳಿದ ಒಂದು ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆಂದರೆ ಶ್ರೀಮಾನ್ ಪುಟ್ಟಸ್ವಾಮಿಯವರು ಈ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸುವಾಗ, ಮನಃಪೂರ್ತಿಯಾಗಿ ಸಮರ್ಥನೆ ಮಾಡಲಿಲ್ಲ, ಎಂದು ಹೇಳಿದರಂತೆ. ಇಲ್ಲಿ ಬರೆದುಕೊಂಡಿರುವ ಟಿಪ್ಪಣಿಯ ಪ್ರಕಾರ ಆ ವಿಚಾರ ನನಗೆ ತಿಳಿಯಿತು. ಶ್ರೀಮಾನ್ ಸಿದ್ಧವೀರಪ್ಪನವರು ಯಾವ ಕಾರಣದಿಂದ ಹಾಗೆ ಹೇಳಿದರೆಂದು ನನಗೆ ಅರ್ಥವಾಗಲಿಲ್ಲ.

(ಶ್ರೀ ಕೆ. ಪುಟ್ಟಸ್ವಾಮಿ)

ಈ ಮಸೂದೆಯಲ್ಲಿ ಅಡಕವಾದಂತಹ ತತ್ವ ಬಹಳ ಗಹನವಾದುದು. ಇದರಿಂದ ನಮ್ಮ ದೇಶದ ಜನರ ಕಲ್ಯಾಣ ಸಾಧನೆಯಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಶ್ರೀಮಾನ್ ಚನ್ನಬಸಪ್ಪನವರು ಮಧ್ಯೆ ಒಂದೆರಡು ವಿಚಾರ ಪ್ರಸ್ತಾಪ ಮಾಡಿದಾಗ ನಾನು ಒಂದು ವಿಚಾರವನ್ನು ಹೇಳಿದೆ. ಈ ಮಸೂದೆಯು ಚರ್ಚೆಯಾಗುವಾಗ, ಇದರಮೇಲೆ ನೀವು ಯಾವುದಾದರೂ ಉಪಯುಕ್ತವಾದ ತಿದ್ದುಪಡಿಗಳನ್ನು ಸಲಹೆ ಮಾಡಿದ್ದರೆ, ಅದನ್ನು ಪರಿಶೀಲನೆ ಮಾಡುವುದಕ್ಕೆ ನಾನು ಸಿದ್ಧನಾಗಿದ್ದೇನೆಂದು. ಬಹುಶಃ ಆ ದಾಟಿಯ ಮಾತು ಅಷ್ಟು ಹಿಡಿಸಲಿಲ್ಲವೆಂದೆನಿಸುತ್ತದೆ. ನಾವು ಯಾವುದಾದರೂ ಒಂದು ವಿಚಾರ ಇಲ್ಲಿ ತಂದರೆ, ಕೊನೆಯತನಕ ಅದನ್ನೇ ಪಟ್ಟು ಹಿಡಿದು ಸಾಧನೆ ಮಾಡುವುದು, ಒಂದು ಅಭ್ಯಾಸವೆಂದು ಅವರು ತಿಳಿದುಕೊಂಡಿರಬಹುದು. ನನಗೆ ಹಾಗೆ ಇಲ್ಲ. ನಾನು ಎಲ್ಲವನ್ನು ತಿಳಿದವನೆಂದು ಏನೂ ಅಲ್ಲ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರ ಸಾಧನೆ ಸುಧಾರಣೆ ಬಗ್ಗೆ ಆಶ್ಚರ್ಯರಾದ ಮಾತನ್ನು ಯಾರೂ ಹೇಳುವುದಕ್ಕಾಗುವುದಿಲ್ಲ. ಆಗಿಂದಾಗ್ಯೆ ಅನೇಕ ಶಾಸನಗಳಿಗೆ ತಿದ್ದುಪಡಿಗಳ ಅವಶ್ಯವಿದೆ. ಅನೇಕರು ಇಂಥ ಸಮಯದಲ್ಲಿ ಕಟುವಾಗಿ ಮಾತನಾಡಿದ್ದು ಉಂಟು. ಹೋದ ವರ್ಷ ಈ ಶಾಸನ ಮಾಡುವಾಗ ಇದು ಹೊಳೆಯಲಿಲ್ಲವೇ, ಅಥವಾ ನೀವು ಕೇಳಲಿಲ್ಲವೇ, ಅಥವಾ ಚುನಾವಣೆಯಿಂದ ನಿಮಗೆ ಪರಿಶೀಲನೆ ಮಾಡುವುದಕ್ಕೆ ಅವಕಾಶ ಇರಲಿಲ್ಲವೇ, ಅಥವಾ ಶಕ್ತಿ ಇರಲಿಲ್ಲವೇ, ಎಂದು, ಈ ರೀತಿಯಲ್ಲಿ ಮೂದಲಿಸಿದ್ದು ಉಂಟು. ಆದರೆ, ಅಂಥ ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ, ಯಾರು ಆ ರೀತಿಯ ಭಾವನೆಯನ್ನು ಇಟ್ಟುಕೊಂಡಿದ್ದಾರೋ, ಅವರಿಗೆ ಈ ಶಾಸನವು ಜಾರಿಗೆ ಬಂದ ಮೇಲೆ, ಇದರ ಅವಶ್ಯಕತೆ ಉಟೆಂದು ಸ್ಪಷ್ಟವಾಗುತ್ತದೆ. ಅವಶ್ಯಕವಾದ ತಿದ್ದುಪಡಿಗಳನ್ನು ಜಾರಿಗೆ ತರುವುದಕ್ಕೆ ಪರಿಶೀಲನೆ ಮಾಡುತ್ತಿದ್ದಾರೆಂದು, ಭಾವನೆ ಮಾಡಬೇಕೇ ವಿನಹ ಕಣ್ಣು ಮುಚ್ಚಿಕೊಂಡು ನಾವು ಆಡಳಿತ ಸಿಬ್ಬಂದಿಯವರು ಅಡ್ಡಿಯಾಗಿದ್ದಾರೆ, ಅಂತಹ ಅಡ್ಡಿಯನ್ನು ತೆಗೆದುಹಾಕುವುದಕ್ಕೆ ಇದನ್ನು ತಂದಿದ್ದೇವೆಂದು ಯಾರೂ ಭಾವಿಸಬೇಕಾಗಿಲ್ಲ. ನಾವು ಎಷ್ಟೋ ಎಚ್ಚರಿಕೆಯಿಂದ ಶಾಸನಗಳನ್ನು ಮಾಡಿದರೂ, ಅದರಿಂದ ತಪ್ಪುಗಳು ಆಗುತ್ತವೆ. ನಮ್ಮ ತಪ್ಪನ್ನು ಹೈಕೋರ್ಟು ನ್ಯಾಯಾಧೀಶರು ಎತ್ತಿ ತೋರಿಸಿದಮೇಲೆ ಪುನಃ ಅದರಮೇಲೆ ಸುಪ್ರೀಂ ಕೋರ್ಟಿನಲ್ಲಿ ಬೇರೇ ತೀರ್ಪಾದ ಅನೇಕ ಸಂದರ್ಭಗಳು ಉಂಟು. ಎಲ್ಲಾ ತೀರ್ಪು ಆದಮೇಲೆ ಅದು ಶಾಶನಕ್ಕೆ ಯಾವ ಒಂದು ಅರ್ಥ ಕೊಡುತ್ತದೆ, ಹಾಗೆ ಅದನ್ನು ಜಾರಿಗೆ ಕೊಡುವುದಾದರೆ, ಯಾವಾಗ ಅದರಿಂದ ಜನರಿಗೆ ನ್ಯಾಯವಾಗುವುದಿಲ್ಲವೋ, ಆಗ ಶಾಸನಕ್ಕೆ ತಿದ್ದುಪಡಿ ಮಾಡುವುದು ಉಂಟು. ಶಾಸನಗಳನ್ನು ಮಾಡುವಾಗ ಎಷ್ಟೋ ಶ್ರದ್ಧೆ ವಹಿಸಿದ್ದಾಗ್ಯೂ ಕೊನೆಯಲ್ಲಿ ಅಡ್ಡಿ ಆತಂಕಗಳು ಬರುವುದು ಉಂಟು. ಈ ಶಾಸನ ಬಹಳ ಮುಖ್ಯವಾದುದು. ಅನೇಕರು ಈ ಮಸೂದೆಯ ಮೇಲೆ ಚರ್ಚೆಮಾಡಿ, ಅನೇಕ ವಿಚಾರಗಳನ್ನು ಹೇಳಿದ್ದಾರೆ. ಕೆಲವರು ತತ್ವಗಳನ್ನು ಒಪ್ಪುವುದು ಕಷ್ಟ ಎಂದು ಕೂಡ ಹೇಳಿದ್ದಾರೆ. ಇಲ್ಲಿ ಮೂಲಭೂತವಾದ ತತ್ವವೇನೆಂದರೆ ನಮ್ಮ ರಾಜ್ಯದಲ್ಲಿ ಹರಿಯುತ್ತಿರತಕ್ಕ ನೀರು, ಮಳೆಯಿಂದ ಬಿದ್ದ ಪ್ರತಿಯೊಂದು ಹನಿ, ಪ್ರತಿಯೊಂದು ತೊಟ್ಟು ನೀರು ಇವೆಲ್ಲವನ್ನೂ ಶೇಖರಿಸಿ ನಮ್ಮ ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುವುದು. ಸಣ್ಣ ನೀರಾವರಿ ಮಧ್ಯಮ ದರ್ಜೆಯ ಕಾಮಗಾರಿ ಮತ್ತು ದೊಡ್ಡ ಕಾಮಗಾರಿಗಳನ್ನು ಆದಷ್ಟು ಜಾಗ್ರತೆಯಾಗಿ ಪೂರೈಸಬೇಕು ಮತ್ತು ನಮ್ಮ ರೈತರ ಜೀವನ ಮಟ್ಟವನ್ನು ಉತ್ತಮಪಡಿಸಬೇಕು, ಮತ್ತು ನಾವು ಪರದೇಶಗಳ ಮೇಲೆ ಆಹಾರಕ್ಕಾಗಿ ಅವಲಂಬಿಸಬಾರದು ಎಂಬುದು ಎಲ್ಲರಿಗೂ ಇರುವ ಆಕಾಂಕ್ಷೆ ಮತ್ತು ಕಾತುರತೆಯಾಗಿದೆ. ಈ ಮೂಲಭೂತ ತತ್ವಗಳನ್ನು ಒತ್ತಿ ಒತ್ತಿ ಹೇಳಿರುವುದಕ್ಕಾಗಿ ಮತ್ತು ಈ ನೀರಾವರಿ ಕಾಮಗಾರಿಗಳನ್ನು ಆದಷ್ಟು ಜಾಗ್ರತೆ ಕೈಗೊಂಡು ಪೂರ್ಣಗೊಳಿಸಬೇಕೆಂದು ಹೇಳಿದಂತಹ ಎಲ್ಲ ಸಧಸ್ಯರಿಗೂ ನನ್ನ ಅಭಿನಂದನೆಗಳು. ನೀರಾವರಿ ಕಾರ್ಯದಲ್ಲಿ ಲಿಫ್ಟ್ ಇರಿಗೇಶನ್ ಬೆಟ್ಟರ್‌ಮೆಂಟ್ ಕಾಂಟ್ರಿಬ್ಯೂಶನ್ ಅಂಡ್ ವಾಟರ್ ರೇಟ್ ಈ ಸಭೆಯು ಒಪ್ಪಿಕೊಂಡು ಇದು ಆಚರಣೆಯಲ್ಲಿ ಇದೆ. ಅದರಲ್ಲಿರತಕ್ಕ ಮುಖ್ಯ ಅಂಶಗಳನ್ನು ಇಲ್ಲಿ ಹೇಳಬೇಕಾದ ಅವಶ್ಯಕತೆ ಇಲ್ಲ. ಬಹುಶಃ ಒಂದು ಎಕರೆ ನೀರಾವರಿ ಕಾಮಗಾರಿ ಆಗಬೇಕಾದರೆ, ಸರ್ಕಾರದವರು ಅದಕ್ಕೆ ಎರಡು ಸಹಸ್ರ ರೂಪಾಯಿಗಿಂತ ಹೆಚ್ಚು ಖರ್ಚು ಮಾಡಬೇಕಾಗಿದೆ. ಆ ಮಟ್ಟಕ್ಕೆ ಭೂಮಿಯ ಬೆಲೆ ಹೆಚ್ಚುತ್ತದೆ. ಆ ಭೂಮಿಯ ಬೆಲೆ ಹೆಚ್ಚಬೇಕಾದರೆ, ಆ ಭೂಮಿಯನ್ನು ಆಬಾದು ಮಾಡಬೇಕಾಗುತ್ತದೆ. ಅವನಿಗೆ ಹಣ ಒದಗಿಸಬೇಕು, ಉಪಕರಣಗಳನ್ನು ಒದಗಿಸಬೇಕು, ಮತ್ತು ಸರ್ಕಾರ ಆದಷ್ಟು ಪ್ರೋತ್ಸಾಹ ಕೊಟ್ಟು ಆ ಭೂಮಿಯನ್ನು ಫಲವತ್ತಾಗಿ ಆಗುವಹಾಗೆ ಮಾಡುವುದು ಅವಶ್ಯಕ. ಎಲ್ಲಾ ವಿಧದಲ್ಲೂ ಸರ್ಕಾರದವರು ರೈತನಿಗೆ ಸಹಾಯ ಮಾಡಬೇಕು. ಈ ಮಸೂದೆ ಕಾನೂನಾಗುವಂತಹ ಸಂದರ್ಭದಲ್ಲಿ ರೈತನು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗು

ತ್ತದೆ. ಅದು ಈ ಸಭೆಯಲ್ಲಿರತಕ್ಕ ಎಲ್ಲರಿಗೂ ಗೊತ್ತಿದೆ. ಎಲ್ಲಾ ರೈತರೂ ಋಣಬಾಧೆಯಲ್ಲಿ ಮುಳುಗಿದ್ದಾರೆಂಬುದನ್ನು ಎಲ್ಲರೂ ಹೇಳಿದ್ದಾರೆ. ಇಂಥ ಸಂದರ್ಭದಲ್ಲಿ ನಾವು ಮಾಡಬೇಕಾದದ್ದು ಏನು? ಅದನ್ನು ಕೂಲಂಕುಷವಾಗಿ ಪರೀಶೀಲನೆ ಮಾಡಬೇಕು. ಈ ಅಭಿವೃದ್ಧಿಯ ತೆರಿಗೆಯನ್ನು ರೈತ ಕೊಡುವ ಒಂದು ಅವಕಾಶವನ್ನು ಕಲ್ಪನೆ ಮಾಡಬೇಕು. ಮೊದಲನೆಯದು ಕೆಲವು ಮಂದಿ ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕ ಅಭಿಪ್ರಾಯಗಳಲ್ಲಿ ಸತ್ಯ ಉಂಟು. ನಮ್ಮಲ್ಲಿ ಕಾಮಗಾರಿಗಳನ್ನು ಕೈಗೊಂಡರೆ ಅದು ಮುಗಿಯಬೇಕಾದರೆ ಹಲವಾರು ವರ್ಷಗಳಾಗುತ್ತವೆ ಮತ್ತು ಅದು ಪೂರ್ತಿ ಮುಗಿದನಂತರ ಅದರ ಪ್ರತಿಫಲ ರೈತರ ಕೈಗೆ ಸಿಗುತ್ತದೆ. ಆದುದರಿಂದ ನೀರಾವರಿ ಅಭಿವೃದ್ಧಿ ತೆರಿಗೆಯನ್ನು ಮುಂಗಡವಾಗಿ ಕೊಡಬೇಕೆಂದರೆ, ಅವನು ಕೊಡುವುದಾದರೂ ಹೇಗೆ ಎಂದು ಕೇಳಿದರು.

ಶ್ರೀ ಎಲ್. ಶ್ರೀಕಂಠಯ್ಯ.—ರೈತರಿಗೆ ತಾಲ್ಲೂಕಾ ಬೋರ್ಡಿನವರು ಹಣ ಕೊಡುವುದಕ್ಕೆ ಆಗುವುದಿಲ್ಲ. ಸರಕಾರದವರು ಸಾಲ ಕೊಟ್ಟರೆ ಅದರ ಬಡ್ಡಿಯನ್ನು ಯಾರು ತೀರಿಸಬೇಕು?

ಶ್ರೀ ಕೆ. ಪುಟ್ಟಸ್ವಾಮಿ.—ಬಡ್ಡಿ ಕೊಡಬೇಕಾಗಿ ಬರುತ್ತದೆ. ಬಡ್ಡಿ ಕೊಡದೇ ಯಾರೂ ಸಾಲ ಕೊಡುವುದಿಲ್ಲ. ಶ್ರೀಮಾನ್ ಶ್ರೀಕಂಠಯ್ಯನವರು ಇಲ್ಲಿ ಕೇಳಿದ ಪ್ರಶ್ನೆ ಸಮಯೋಜಿತವಾಗಿದೆ. ತಾಲ್ಲೂಕಾ ಬೋರ್ಡುಗಳವರು ಬರೀ ಸಂಪ್ರದಾಯಕ್ಕೆ ಶರಣಾದರೆ ಆರ್ಥಿಕ ಅಭಿವೃದ್ಧಿಯಾಗುವುದಿಲ್ಲ. ಇದರ ಬಗ್ಗೆ ರಾಜಕೀಯ ಧುರೀಣರು ಗಮನ ಕೊಡಬೇಕು ಎಂದು ಹೇಳುವಾಗ ಇದರ ಬಗ್ಗೆ ಧೈರ್ಯದಿಂದ ಹೆಜ್ಜೆ ಇಡಬೇಕು. ರೈತನ ಪರಿಸ್ಥಿತಿಯನ್ನು ಉತ್ತಮಪಡಿಸುತ್ತೇವೆಂದು ಹೇಳಿದ ಮಾತ್ರಕ್ಕೆ ಅವನ ಉದ್ಧಾರವಾಗುವುದಿಲ್ಲ. ರೈತನು ಮಾಡುವ ಕಸಬು ಲಾಭದಾಯಕವಾಗಿರಬೇಕು ರೈತರ ಮಕ್ಕಳು ವಿದ್ಯಾವಂತರಾಗಿ ಅವರಿಗೆ ಬೇಕಾಗುವ ಬಟ್ಟೆಬರೆಗಳಿಗೆ ಅನುಕೂಲವಾಗಿ ಸುಖ ಜೀವನ ಮಾಡುವ ಪರಿಸ್ಥಿತಿಗೆ ಬರಬೇಕು. ಅವರ ಕಸಬು ಲಾಭದಾಯಕವಾಗಿದ್ದರೆ ಅವರು ಸುಖವಾಗಿ ಜೀವನ ಮಾಡುವ ಪರಿಸ್ಥಿತಿಗೆ ಬರುತ್ತಾರೆ. ಸರಕಾರ ಕೂಡ ರೈತನ ಕಸುಬನ್ನು ಲಾಭದಾಯಕವಾಗಿ ಮಾಡಲು ಅವನ ಕಷ್ಟಗಳನ್ನು ಪರಿಹಾರ ಮಾಡಲು ಅವನಿಗೆ ರಕ್ಷಣೆ ಕೊಡಬೇಕು ಮತ್ತು ಅವನಮೇಲೆ ಹೊರೆ ಬೀಳುವಂತೆ ಮಾಡಬಾರದು. ಇಷ್ಟೆಲ್ಲಾ ಭಾವನೆಗಳಿಂದ ಕೂಡಿರುವ ಮಾರ್ಗ ಇಲ್ಲವೆ ಎಂದು ಹೇಳುತ್ತಿಲ್ಲ. ಆದಷ್ಟು ಜಾಗ್ರತೆ ಕಾಲವಿಳಂಬವಾಗದ ರೀತಿಯಲ್ಲಿ ರೈತ ತಾನು ಅನುಸರಿಸುತ್ತಿರುವ ಕಸಬಿಗೆ ರಕ್ಷಣೆ ಒದಗಿಸಿ ಲಾಭದಾಯಕವಾದ ವೃತ್ತಿಯನ್ನು ಮಾಡುವುದು ಅತ್ಯಂತ ಅವಶ್ಯಕವಾಗಿದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಈ ಮಸೂದೆಯನ್ನು ಇದೇ ರೀತಿಯಲ್ಲಿ ಕಾನೂನು ಮಾಡಲು ಸಭೆಯ ಅನುಮತಿ ಪಡೆಯಬೇಕು ಎನ್ನುವ ಆಸೆ ನನಗಿತ್ತು. ಆದಷ್ಟು ಜಾಗ್ರತೆ ಇದು ಕಾನೂನಾಗಲಿ ಆದಷ್ಟು ಜಾಗ್ರತೆ ರೈತನಿಗೆ ಅನುಕೂಲವಾಗಲಿ ಎನ್ನುವ ಒಂದು ಆಸೆಯೂ ಇತ್ತು. ಆದರೆ ಇಲ್ಲಿ ಎಲ್ಲ ಸದಸ್ಯರ ಅಭಿಪ್ರಾಯಗಳನ್ನು ಕೇಳಿದಮೇಲೆ ಇನ್ನೂ ಪ್ರಯೋಜನವಾಗುವಂತೆ ಈ ಮಸೂದೆಯನ್ನು ಮಾರ್ಪಾಡು ಮಾಡಬೇಕು ಎನ್ನುವ ಅಭಿಪ್ರಾಯ ಬಂತು. ಇದನ್ನು ಕೇಳಿದ ಮೇಲೆ ನನಗನಿಸುತ್ತಿರುವುದು ಈ ಸಭೆಯ ಮಾನ್ಯ ಸದಸ್ಯರು ಹೇಳಿರುವ ಅಭಿಪ್ರಾಯಗಳಿಗೆಲ್ಲಾ ಆಮೂಲಾಗ್ರವಾಗಿ ಉತ್ತರಕೊಟ್ಟು ಈ ಸಭೆಯ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಪ್ರತಿಯೊಬ್ಬ ಸದಸ್ಯರೂ ಹೇಳಿರುವ ಎಲ್ಲ ವಿಚಾರಗಳಿಗೂ ಈಗ ಇಲ್ಲಿ ಉತ್ತರ ಕೊಡುವುದು ಅಷ್ಟು ಸಮಂಜಸವಲ್ಲ. ಈ ಮಸೂದೆಯನ್ನು ಮತ್ತಷ್ಟು ವ್ಯವಸ್ಥಿತವಾದ ರೀತಿಯಲ್ಲಿ ತರಲು ಇದನ್ನು ಒಂದು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಕ್ಕಾಗಿ ಈ ಸಭೆಯ ಮುಂದೆ ಒಂದು ಸೂಚನೆಯನ್ನು ಇಡುತ್ತೇನೆ ಮತ್ತು ಅದಕ್ಕೆ ತಮ್ಮೆಲ್ಲರ ಅನುಮತಿಕೊಡಬೇಕೆಂದು ಕೋರುತ್ತೇನೆ. ಈ ಸಭೆಯಲ್ಲಿರುವ ಎಲ್ಲ ಹಿರಿಯ ಸದಸ್ಯರೂ ಇನ್ನೂ ಹೆಚ್ಚು ಉಪಯುಕ್ತವಾದ ರೀತಿಯಲ್ಲಿ ಈ ಮಸೂದೆಯನ್ನು ಬದಲಾವಣೆ ಮಾಡಬೇಕೆಂದು ಕೇಳುವುದರಲ್ಲಿ ಯಾವ ಆಕ್ಷೇಪಣೆಯೂ ಇಲ್ಲ. ಈ ಸೆಲೆಕ್ಟ್ ಸಮಿತಿಯಲ್ಲಿ ಪರಿಣತಿಮಟ್ಟದ ಎಲ್ಲ ಸದಸ್ಯರುಗಳೂ ಇರುವುದರಿಂದ ಮತ್ತು ಅವರು ಸಮಾಜದಲ್ಲಿರುವ ರೈತರ ಆರ್ಥಿಕ ಮಟ್ಟ ಹೇಗಿದೆ ಎಂದು ತಿಳಿದಿರುವುದರಿಂದ ಆದಷ್ಟು ಜಾಗ್ರತೆ ಮುಂದಿನ ಅಧಿವೇಶನದೊಳಗೆ ಈ ಮಸೂದೆಯನ್ನು ಪರಿಶೀಲನೆ ಮಾಡಿ ಅವರು ಶಿಫಾರಸುಗಳನ್ನು ಮಾಡಬೇಕೆಂದು ಕೇಳುತ್ತೇನೆ. ಆಗ ಬಹುಶಃ ಹೆಚ್ಚಿನ ಮಟ್ಟದಲ್ಲಿ ಈ ಮಸೂದೆಗೆ ಸಭೆಯ ಅನುಮತಿ ದೊರೆಯುತ್ತದೆ ಎನ್ನುವ ಆಸೆ ನನಗೆ ಇದೆ. ಆ ಕಾರಣದಿಂದ ಈ ಸಭೆಯ ಕಾಲವನ್ನು ಹೆಚ್ಚು ತೆಗೆದುಕೊಳ್ಳದೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI H. N. NANJE GOWDA.—Sir, in the light of the assurance given by the Hon. Minister that he is going to refer the Bill to a Select Committee, I beg leave of the House to withdraw my amendment that the Mysore Irrigation (Levy of Betterment Contribution and Water Rate) (Amendment) Bill, 1969, be circulated for purposes of eliciting public opinion.

MR. DEPUTY SPEAKER.—The amendment was by leave withdrawn.

The question is :

"That the Mysore Irrigation (Levy of Betterment Contribution and Water Rate) (Amendment) Bill, 1969, be taken into consideration."

The motion was adopted.

SRI K. PUTTASWAMY.—Sir, I move :

"That the Mysore Irrigation (Levy of Betterment Contribution and Water Rate) (Amendment) Bill, 1969, be referred to a Select Committee consisting of 20 members, *viz.*,

Sriyuths :

1. D. Devaraj Urs
2. K. Singari Gowda
3. N. Chikke Gowda
4. B. N. Ramegowda
5. P. Anjanappa
6. S. M. Gureddy
7. S. K. Amin
8. F. S. Patil
9. Virupaksha Gowda
10. M. Ramappa
11. Smt. Sharadavva S. Pattan
12. Neelakanta Patil
13. H. Siddaveerappa
14. H. N. Nanje Gowda
15. D. B. Kalmankar
16. G. Chandrakanth
17. N. G. Halappa
18. N. A. Channe Gowda
19. T. V. Krishnappa
20. H. M. Channabasappa

Mr. DEPUTY SPEAKER,—The question is :

" That the Mysore Irrigation (Levy of Betterment Contribution and Water Rate) (Amendment) Bill, 1969, be referred to a Select Committee consisting of 20 members, *viz.*,

Sriyuths :

1. D. Devaraj Urs
2. K. Singari Gowda
3. N. Chikke Gowda
4. B. N. Ramegowda
5. P. Anjanappa
6. S. M. Gureddi
7. S. K. Amin
8. F. S. Patil
9. Virupaksha Gowda
10. M. Ramappa
11. Smt. Sharadavva S. Pattan
12. Neelakanta Patil
13. H. Siddaveerappa
14. H. N. Nanje Gowda
15. D. B. Kalmankar
16. G. Chandrakanth
17. N. G. Halappa
18. N. A. Channe Gowda
19. T. V. Krishnappa
20. H. M. Channabasappa

The motion was adopted.

The Bill stands referred to the Select Committee.

Mysore Appropriation (No. 5) Bill, 1969

Motion to Consider.

Sri K. PUTTASWAMY.—Sir on behalf of the Finance Minister I beg to move :

" That the Mysore Appropriation (No. 5) Bill, 1969 be taken into consideration. "